ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

೧೦ನೇ ವರ್ಷ   ೨೩ನೇ ಸಂಚಿಕೆ   ಬೆಲೆ ೧-೦೦ ರೂ

ಕೊಪ್ಪ   ೭-೭-೧೯೯೧   ಭಾನುವಾರ   ದೂರವಾಣಿ : ೧೧೪

ಜಪ್ತಿ ನಿಷೇಧ ಮತ್ತು ಸಾಲ ಮನ್ನಾ ಒತ್ತಾಯಿಸಿ ಜು. ೧೫ ಬಿಜೆಪಿ ಧರಣಿ

ಬಾಳೆಹೊನ್ನೂರು : ಬಗರ್‌ಹುಕುಂ ಸಾಗುವಳಿಯನ್ನು ಮಂಜೂರು/ಖಾಯಂ ಮಾಡಬೇಕು; ರೈತರ ಮತ್ತು ಕೃಷಿ ಕಾರ್ಮಿಕರ ೧೦ ಸಾವಿರ ರೂಪಾಯಿಗಳವರೆಗಿನ ಬುಸ್ತಿ ಸಾಲಗಳನ್ನು ಮನ್ನಾ ಮಾಡಬೇಕು ಹಾಗೂ ಈಗಾಗಲೇ ಸಹಕಾರ ಸಂಘ ಮತ್ತು ಕೃಷಿ ಬ್ಯಾಂಕುಗಳಿಂದ ರೈತರ ಆಸ್ತಿಪಾಸ್ತಿ ಜಪ್ತಿಗಾಗಿ ಹೊರಡಿಸಿರುವ ನೋಟೀಸುಗಳನ್ನು ವಾಪಸು ಪಡೆಯಬೇಕು ಎಂದು ಒತ್ತಾಯಿಸಲು ಭಾರತೀಯ ಜನತಾ ಪಕ್ಷವು ಜುಲೈ ೧೫ ಸೋಮವಾರ ಜಿಲ್ಲೆಯ ಎಲ್ಲಾ ತಾಲ್ಲೂಕು ಕಛೇರಿಗಳ ಮುಂದೆ ರೈತರನ್ನು ಸೇರಿಸಿ ಪ್ರತಿಭಟನಾ ಪ್ರದರ್ಶನ ಮತ್ತು ಧರಣಿ ನಡೆಸಲಿದೆ.

ಪತ್ರಿಕಾ ಪ್ರಕಟಣೆಯಲ್ಲಿ ಈ ವಿಚಾರ ತಿಳಿಸಿರುವ ಬಿಜೆಪಿ ಜಿಲ್ಲಾಧ್ಯಕ್ಷ ಬಿ. ಎಸ್. ವಿಠಲರಾವ್ ಅವರು, ರೈತರ ಸಾಲ ಮನ್ನಾ ಮಾಡುವುದಾಗಿ ೧೯೮೯ರ ವಿಧಾನ ಸಭಾ ಚುನಾವಣೆಯಲ್ಲಿ ಭರವಸೆ ಕೊಟ್ಟು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ತನ್ನ ಮಾತನ್ನು ಮುರಿದು ಬುಸ್ತಿ ಸಾಲಗಾರರ, ರೈತರ ಆಸ್ತಿ ಪಾಸ್ತಿಗಳನ್ನು ಹರಾಜು ಹಾಕಲು ಮುಂದಾಗಿರುವುದನ್ನು ಕಡೂರಿನಲ್ಲಿ ಜು ೪ರಂದು ನಡೆದ ಪಕ್ಷದ ಜಿಲ್ಲಾ ಸಮಿತಿ ಸದಸ್ಯರ ಹಾಗೂ ಪ್ರಮುಖ ಕಾರ್ಯಕರ್ತರ ಸಭೆ ಖಂಡಿಸಿ ಪ್ರತಿಭಟನೆಯ ನಿರ್ಧಾರ ಕೈಗೊಂಡಿತೆಂದು ತಿಳಿಸಿದ್ದಾರೆ.

ಅಕ್ರಮ ಸಾಗುವಳಿ ಖಾಯಂಗೆ ಅರ್ಜಿ ಸ್ವೀಕಾರ

ಶೃಂಗೇರಿ : ಸಣ್ಣ ಮತ್ತು ಅತಿ ಸಣ್ಣ ರೈತರು, ಭೂ ರಹಿತರು, ಕೃಷಿ ಕಾರ್ಮಿಕರು ಹಾಗೂ ಪರಿಶಿಷ್ಟ ಜಾತಿ/ವರ್ಗದವರು ಮಾಡುತ್ತಿರುವ ಅಕ್ರಮ (ಬಗರ್‌ಹುಕುಂ) ಸಾಗುವಳಿಗಳನ್ನು ಸಕ್ರಮಗೊಳಿಸುವ ಬಗ್ಗೆ ಆಯಾ ತಾಲ್ಲೂಕು ತಹಸೀಲ್ದಾರರು ಅರ್ಜಿಗಳನ್ನು ಸ್ವೀಕರಿಸುತ್ತಿದ್ದಾರೆ.

ಇಂಥ ಜಮೀನುಗಳನ್ನು ಕನಿಷ್ಠ ೩ ವರ್ಷಗಳಿಂದ ಸಾಗುವಳಿ ಮಾಡಿರಬೇಕು. ಈ ಸಕ್ರಮ ಸವಲತ್ತು ಮೇಲ್ಕಂಡ ವರ್ಗಗಳ ೩೦ ಎಕರೆ ಖುಷ್ಕಿ ಸಾಗುವಳಿಗೆ ಮಾತ್ರ ಅನ್ವಯಿಸುತ್ತದೆ.

ಅರ್ಜಿಗಳನ್ನು ನಮೂನೆ-೫೦ರಲ್ಲಿ ಸಲ್ಲಿಸಬೇಕು. ಇದಕ್ಕೆ ಯಾವುದೇ ಅಂತಿಮ ಗಡುವನ್ನು ಇನ್ನೂ ನಿಗದಿಪಡಿಸಿಲ್ಲ

ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮಾಮ್ಕೋಸ್ ಪ್ರೋತ್ಸಾಹ ಧನ

ಶಿವಮೊಗ್ಗದ ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘವು ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ವಾಸಿಸುವ ಸಂಘದ ಸದಸ್ಯರ ಮಕ್ಕಳಲ್ಲಿ ಹೆಚ್ಚು ಅಂಕಗಳನ್ನು ಗಳಿಸಿ ಎಸ್.ಎಸ್.ಎಲ್.ಸಿ. ಮತ್ತು ಅಂತಿಮ ಪಿ. ಯು. ಸಿ ಯಲ್ಲಿ ಉತ್ತೀರ್ಣರಾದವರಿಗೆ ಪ್ರೋತ್ಸಹಧನ ನೀಡಲಿದೆ.

ಅರ್ಹವಿದ್ಯಾರ್ಥಿಗಳು ದಿನಾಂಕ ೨೦-೭-೧೯೯೧ರ ಒಳಗಾಗಿ ತಾವು ಪಾಸಾದ ಪರೀಕ್ಷೆ, ಸರ್ಟಿಫೈಡ್ ಮಾರ್ಕ್ಸ್‌ಕಾರ್ಡ್, ತಮ್ಮ ಹೆಸರು, ತಮ್ಮ ತಂದೆಯ ಹೆಸರು, ಅವರು ಸಂಘದಲ್ಲಿದ್ದ ಸದಸ್ಯತ್ವದ ನಂಬರುಗಳ ಮಾಹಿತಿಯನ್ನು ಅರ್ಜಿಯಲ್ಲಿ ಕಾಣಿಸಿ, ಸಂಘದ ಕಾರ್ಯದರ್ಶಿಯವರಿಗೆ ಅರ್ಜಿ ಸಲ್ಲಿಸಬೇಕು.

ಗೂಂಡಾಕಾಯ್ದೆಯಡಿ ಶಂಕರ್ ಕಾರ್ಮಿಕ ನಾಯಕರನ್ನು ಬಂಧಿಸಿದ್ದ ತಹಸೀಲ್ದಾರ್ ಕ್ರಮ ಏಕಪಕ್ಷೀಯ—ತೀರ್ಪು

ಚಿಕ್ಕಮಗಳೂರು : ಶಂಕರ್ ಸಾರಿಗೆ ಕಾರ್ಮಿಕ ನಾಯಕರಾದ ಚಿಕ್ಕೇಗೌಡ ಮತ್ತು ಸಂಜೀವ ಇವರನ್ನು ಕಳೆದ ವರ್ಷದ ಜೂನ್‌ನಲ್ಲಿ ಗೂಂಡಾ ಕಾಯ್ದೆಯನ್ವಯ ನ್ಯಾಯಾಂಗ ಬಂಧನಕ್ಕೊಳಪಡಿಸಿದ್ದ ಕೊಪ್ಪ ತಹಸೀಲ್ದಾರರ ಕ್ರಮ ಏಕ ಪಕ್ಷೀಯವಾದದು ಎಂದು ಜಿಲ್ಲಾ ಸೆಶನ್ಸ್ ನ್ಯಾಯಾಲಯ ತೀರ್ಪಿತ್ತಿದೆ.

ಕೊಪ್ಪ ಸಬ್‌ಇನ್‌ಸ್ಪೆಕ್ಟರ ವರದಿಯ ಮೇರೆಗೆ, ಶಾಂತಿಭಂಗ ಮುಂತಾದ ಆರೋಪಗಳನ್ನು ಹೊರಿಸಿ ಚಿಕ್ಕೇಗೌಡ, ಸಂಜೀವರನ್ನು ೧೬-೬-೯೦ ರಿಂದ ೩೦-೬-೯೦ರವರೆಗೆ ನ್ಯಾಯಾಂಗ ಬಂಧನಕ್ಕೊಳಪಡಿಸಲು ತಹಸೀಲ್ದಾರ್ ಆದೇಶಿಸಿದ್ದರು. ಸಂಜೆ ಕಛೇರಿ ಮುಕ್ತಾಯದ ಹೊತ್ತಿನಲ್ಲಿ ಈ ಕ್ರಮ ಕೈಗೊಂಡಿದ್ದು, ಕಾರ್ಮಿಕ ಮುಖಂಡರ ಯಾವುದೇ ಮನವಿಗೆ ಅವರು ಮನ್ನಣೆ ನೀಡಿರಲಿಲ್ಲ

ಅನಂತರ ಸೆಶನ್ಸ್ ಕೋರ್ಟಿನ ಆದೇಶದಂತೆ ಜೂನ್ ೨೧ ರಂದು ಬಿಡುಗಡೆಗೊಂಡ ಈ ಮುಖಂಡರು, ತಹಸೀಲ್ದಾರರು ತಮಗೆ ಅನಗತ್ಯ ಕಿರುಕುಳ ನೀಡಿದ್ದಾರೆಂದು ಪ್ರತ್ಯೇಕ ದಾವೆಗಳನ್ನು ಹೂಡಿದ್ದರು.

ಪೋಲೀಸರ ವರದಿಯ ಸತ್ಯಾಸತ್ಯತೆ ಪರಾಮರ್ಶಿಸಿ, ಪ್ರಾಥಮಿಕ ತನಿಖೆ ನಡೆಸಿ; ತಹಸೀಲ್ದಾರರು ನಿಯಮ ೧೧೧ರಂತೆ ತೀರ್ಪು ನೀಡುವ ಬದಲು, ನಿಯಮ ೧೧೦ರ ಪ್ರಕಾರದ ಪ್ರಾಥಮಿಕ ತನಿಖೆಯನ್ನೂ ಮಾಡದೆ, ತಮ್ಮ ವ್ಯಾಪ್ತಿ ಮೀರಿ ಏಕ ಪಕ್ಷೀಯವಾಗಿ ಹಾಗೂ ಪೋಲೀಸರ ಏಜೆಂಟರಂತೆ ವರ್ತಿಸಿದ್ದಾರೆಂದು ನ್ಯಾಯಾಧೀಶರು ಜೂನ್ ೨೬ರ ತಮ್ಮ ತೀರ್ಪಿನಲ್ಲಿ ಕಟುವಾಗಿ ಅಭಿಪ್ರಾಯ ಪಟ್ಟಿದ್ದಾರೆ.

ಈ ವರ್ಷ ಜಿಲ್ಲೆಯಲ್ಲಿ ೪೬೦೦ ನಿವೇಶನ ನೀಡಿಕೆ

ಚಿಕ್ಕಮಗಳೂರು : ಜಿಲ್ಲೆಯಲ್ಲಿ ಈ ವರ್ಷ ೪೬೦೦ ನಿವೇಶನಗಳನ್ನು ಹಂಚಬೇಕಾಗಿದ್ದು, ಇದರ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಈ ಬಗ್ಗೆ ಈಗಾಗಲೇ ಗ್ರಾಮವಾರು ಪಟ್ಟಿ ತಯಾರಿಸುವ ಹಾಗೂ ವಿತರಣೆಯ ಬಗ್ಗೆ ಸಿದ್ಧತೆಗಳು ನಡೆದಿವೆಯೆಂದು ವರದಿಯಾಗಿದೆ.

ವಿದ್ಯೆಗೇ ಹಾದರಗೈದ ರಾಮಕೃಷ್ಣಯ್ಯಗೆ ವರ್ಗ

ಕೊಪ್ಪ : ಇಲ್ಲಿನ ಕಿರಿಯ ಕಾಲೇಜಿನ ಮಾಜಿ ಇನ್‌ಚಾರ್ಜ್ ಪ್ರಿನ್ಸಿಪಾಲ್ ರಾಮಕೃಷ್ಣಯ್ಯನಿಗೆ ಬಳ್ಳಾರಿ ಜಿಲ್ಲೆಯ ಹಂಪಸನಹಳ್ಳಿಗೆ ವರ್ಗವಾಗಿದೆ ಎಂದು ತಿಳಿದುಬಂದಿದೆ. ಅವರು ಈ ಹಿಂದೆ ಅದೇ ಜಿಲ್ಲೆಯ ಕೂಡ್ಲಿಗಿಯಲ್ಲಿ ಕೆಲಸ ಮಾಡಿದ್ದವರೆನ್ನಲಾಗಿದೆ. ಆದರೆ ಅವರಿಗಿನ್ನೂ ಇಲ್ಲಿಂದ ರಿಲೀವ್ ಆಗಿಲ್ಲ.

ಕಳೆದ ವಾರ ಅವರು ಕಛೇರಿಯ ಹಲವು ಪ್ರಮುಖ ಕಪಾಟುಗಳ ಬೀಗದ ಕೈಗಳನ್ನು ಕೊಡದೆ ಹೋಗಿದ್ದು, ಹಾಲಿ ಇನ್‌ಚಾರ್ಜ್ ಪ್ರಿನ್ಸಿಪಾಲ್ ಸುಬ್ರಮಣ್ಯ ಅವರು ಶಾಲಾಭಿವೃದ್ಧಿ ಸಮಿತಿಯವರ ಸಮ್ಮುಖದಲ್ಲಿ ಬೀಗಗಳನ್ನು ಒಡೆಸಬೇಕಾಯಿತು. ಟೈಪಿಂಗ್ ಪರೀಕ್ಷೆಗಳು ಈ ಕಾಲೇಜಿನಲ್ಲೇ ನಡೆಯಲು ಏರ್ಪಾಡಾಗಿದ್ದು, ಪ್ರಶ್ನೆಪತ್ರಿಕೆಗಳು ಮತ್ತಿತರ ಸಾಮಗ್ರಿಗಳು ಆ ಕಪಾಟುಗಳಲ್ಲೇ ಇದ್ದುವು ಎನ್ನಲಾಗಿದೆ.

೨-೩ ದಿನ ಬಿಟ್ಟು, (ಬಹುಶಃ ಬೆಂಗಳೂರಿಗೆ ಹೋಗಿ ವರ್ಗಾವಣೆ ಆಜ್ಞೆಯನ್ನು "ಕೊಂಡು ಕೊಂಡು") ಬಾಡಿಗೆ ಕಾರಿನಲ್ಲಿ ಆತ ಪುನಃ ಬಂದಿದ್ದು, ಕಾರು ಕಾಲೇಜಿನ ಬಳಿ ಭೂ ಅಭಿವೃದ್ಧಿ ಬ್ಯಾಂಕ್ ಟೈಪಿಸ್ಟ್ ಕು| ಸರೋಜ ಎಂಬವರಿಗೆ ಡಿಕ್ಕಿಹೊಡೆಯಿತು. ಅವರನ್ನು ತೀವ್ರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಪೋಲೀಸರು ಕಾರಿನ ಡ್ರೈವರ್‌ನನ್ನು ಬಂಧಿಸಿ, ಕಾರನ್ನು ಅಮಾನತು ಪಡಿಸಿದ್ದರು. ಕಾರಿನ ಬಾಡಿಗೆಯನ್ನೂ ಸಹ ಕೊಟ್ಟಿಲ್ಲವೆಂದು ಡ್ರೈವರ್ ಗೋಳು ಕರೆಯುತ್ತಿದ್ದರು.

ಇತ್ತ, ರಾಮಕೃಷ್ಣಯ್ಯನ ಅಕ್ರಮಗಳ ತನಿಖೆಯಾಗಿ ಆತನಿಗೆ ಶಿಕ್ಷೆಯಾಗಲೇಬೇಕು ಎಂದು ಮಹಿಳಾ ಸಂಘಟನೆಗಳು ಮತ್ತು ಸಾರ್ವಜನಿಕರು ಪಟ್ಟು ಹಿಡಿದಿದ್ದಾರೆ. ಆತನನ್ನು ಕೂಡಲೇ ಅಮಾನತು ಪಡಿಸಬೇಕೆಂಬ ಒತ್ತಾಯವೂ ಮುಂದುವರಿದಿದೆ.

ಈ ಮಧ್ಯೆ, ರಾಮಕೃಷ್ಣಯ್ಯನಿಗೆ ಬೇರಾರಿಂದಲೂ ಸಾಧ್ಯವಾಗದಿದ್ದ 'ಕಪಾಳ ಮೋಕ್ಷ'ದ ಶಿಕ್ಷೆಯನ್ನು ಅಭೂತಪೂರ್ವ ರೀತಿಯಲ್ಲಿ ಜಾರಿಗೊಳಿಸಿ, ಮಹಿಳಾ ಸಮೂಹಕ್ಕಾದ ಅನ್ಯಾಯಕ್ಕಾದರೂ ಮುಯ್ಯಿ ತೀರಿಸಿಕೊಂಡ ದಿಟ್ಟ ಮಹಿಳಾ ಸಂಘಟನೆಗಳವರಿಗೆ, ರಾಮಕೃಷ್ಣಯ್ಯನ ಹಿತ ಚಿಂತಕರಾದ ಕೆಲ ಹರಕು ಬಾಯಿಗಳು, "ನೀವೇನು ಮಹಾ ಮಾಡಿದಂತಾಯಿತು ? ಅವನಿಗೆ ಶಾಸಕರು ಮತ್ತು ದೊಡ್ಡ ದೊಡ್ಡ ರಾಜಕಾರಣಿಗಳ ಬೆಂಬಲವಿದೆ. ಅವನು ಹೇಗಾದರೂ ತಪ್ಪಿಸಿಕೊಳ್ಳುತ್ತಾನೆ. ನಿಮ್ಮ ಮೇಲೆಲ್ಲ ಅವನು ಈಗ ದೂರು ಕೊಟ್ಟಿದ್ದಾನಲ್ಲ, ಅದಕ್ಕಿನ್ನು ನೀವು ಸ್ಟೇಶನ್ನಿಗೂ ಕೋರ್ಟಿಗೂ ಅಲೆಯಬೇಕಲ್ಲ !" ಎಂತಲೂ; "ಅವನಿಗೆ ಬುದ್ಧಿ ಕಲಿಸುವುದೇ ಆದರೆ ಅವನಿಗೆ ವರ್ಗ ಆಗದ ಹಾಗೆ ನೀವು ತಡೆಯಬೇಕಿತ್ತು ಇದೇನು ಮಹಾ ಮಾಡಿದ ಹಾಗಾಯಿತು?" ಎಂತಲೂ— ತಮ್ಮ ಅಲ್ಪ ಮತಿಗೆ ತೋಚಿದಂತೆ, ನಾಲಿಗೆ ಹೊರಳಿದಂತೆ 'ಗೇಲಿ' ಮಾಡುತ್ತಿರುವುದಾಗಿ ವರದಿಗಳಿವೆ. ಅಂದರೆ, 'ರಾಮಕೃಷ್ಣಯ್ಯ ಮುಗ್ಧ ವಿದ್ಯಾರ್ಥಿನಿಯರನ್ನು ದುರುಪಯೋಗಪಡಿಸಿಕೊಂಡಿದ್ದಾದರೂ ಅಡ್ಡಿಯಿಲ್ಲ, ಹೊಡೆದದ್ದು ತಪ್ಪು' ಎಂದು ಅರ್ಥವೇ ಅಥವಾ ಹೊಡೆದ 'ತಪ್ಪಿಗೆ' ರಾಮಕೃಷ್ಣಯ್ಯನ ಬಗೆಗಿನ ಎಲ್ಲ ಹೊಣೆಯನ್ನೂ ಈ ಮಹಿಳಾ ಸಂಘಟನೆಗಳೇ ಹೊರಬೇಕು ಎಂಬರ್ಥವೇ ? ಎಂಬುದನ್ನು ಅಂಥವರೇ ಹೇಳಬೇಕಾಗಿದೆ.

ಕೊಪ್ಪ ತಹಸೀಲ್ದಾರ್ ನಂಜನಗೂಡಿಗೆವರ್ಗ

ಕೊಪ್ಪ : ಇಲ್ಲಿ ಕೇವಲ ೨ ವರ್ಷಗಳಿಂದ ತಹಸೀಲ್ದಾರ್ ಆಗಿದ್ದ ಜಿ.ಎಚ್. ನಾಯಕ್ ಅವರಿಗೆ ನಂಜನಗೂಡಿನ ತಹಸೀಲ್ದಾರ್ ಆಗಿ ವರ್ಗವಾಗಿದ್ದು, ಅವರು ಜುಲೈ ೪ರಂದೇ ಅಧಿಕಾರ ವಹಿಸಿ ಕೊಟ್ಟು ಹೊರಟು ಹೋದರು. ತೆಂಗಿನಮನೆ ಕ್ರೀಡಾಂಗಣದ ಹಗರಣ ಹಾಗೂ ನಕಾಶೆ ಬದಲಾವಣೆಯ ವಿವಾದ, ಘಂಟೇನಾಯ್ಕ್ ಎಸ್ಟೇಟಿನ ಟಿ. ಟಿ. ವಿಚಾರದಲ್ಲಿ ಎದ್ದಿದ್ದ ಊಹಾಪೋಹಗಳು ಮುಂತಾಗಿ ಹಲವು ವಿವಾದಗಳಿಂದ ಅವರು ರೋಸಿ ಹೋಗಿ ವರ್ಗಾವಣೆಗೆ ಯತ್ನಿಸಿದರೆಂದೂ, ತಾಲ್ಲೂಕಿನ ಮಿತಿ ಮೀರಿದ ರಾಜಕೀಯ ಹಸ್ತಕ್ಷೇಪದ ಬಗ್ಗೆ ಕೂಡ ಅವರು ತೀವ್ರವಾಗಿ ಆತಂಕಗೊಂಡಿದ್ದರೆಂದೂ ಹೇಳಲಾಗುತ್ತಿದೆ.

ಮಾನಭಂಗ : ಐ. ಪಿ. ಸಿ. ಸೆಕ್ಷನ್ ೩೭೫ ಮತ್ತು ನಮ್ಮ ಮಡಿವಂತ ಸಮಾಜ

ಒಂದು ಕಡೆ ಹೆಣ್ಣಿಗೆ ಮಾತ್ರವೇ ಶೀಲವನ್ನು 'ಪವಿತ್ರ'ಗೊಳಿಸಿ, ಆ ಮೂಲಕವೇ ಆಕೆಯ ಇಡೀ ವ್ಯಕ್ತಿತ್ವವನ್ನು ಅಳೆಯುವ, ನಿಷ್ಕರ್ಷಿಸುವ, ಸಮಾಜವ್ಯವಸ್ಥೆ. ಇನ್ನೊಂದು ಕಡೆ ಅದೇ ಹೆಣ್ಣಿನ ಅದೇ 'ಪವಿತ್ರ' ಶೀಲವನ್ನು ತನ್ನ ಅನುಕೂಲಕ್ಕೆ ಪಾಶವೀತನದಿಂದ ಬಳಸಿಕೊಳ್ಳುವ ಪುರುಷಶಾಹೀ ವಾಸ್ತವಿಕತೆ. ಏಕೆ ಈ ದ್ವಂದ್ವ?

ಇಲ್ಲಿ ನಮ್ಮ ಕಾನೂನು ಏನು ಹೇಳುತ್ತೆ–ನೋಡೋಣ. ಭಾರತೀಯ ದಂಡ ಸಂಹಿತೆ (ಐ. ಪಿ. ಸಿ.) ಸೆಕ್ಷನ್ ೩೭೫ ರಿಂದ ೩೭೬ ಡಿವರೆಗೆ ಹೆಣ್ಣಿನ ಮೇಲೆ ನಡೆಯುವ ಲೈಂಗಿಕ ಬಲಾತ್ಕಾರವನ್ನು ಅಪರಾಧ ಎಂದು ತಿಳಿಸಿದೆ. ೩೭೫ನೇ ಕಲಂ ಪ್ರಕಾರ ಅತ್ಯಾಚಾರ ಎಂದರೆ—"ಒಬ್ಬ ಗಂಡಸು ಇನ್ನೊಂದು ಹೆಣ್ಣಿನೊಂದಿಗೆ ಎ) ಆಕೆಯ ಇಚ್ಛೆಗೆ ವಿರುದ್ಧವಾಗಿ, ಬಿ) ಆಕೆಯ ಒಪ್ಪಿಗೆ ಇಲ್ಲದೆ ಸಿ) ಆಕೆಯ ಒಪ್ಪಿಗೆ ಪಡೆದಿದ್ದರೂ ಸಹ ಅದನ್ನು ಆಕೆಗೆ ಅಥವಾ ಆಕೆಗೆ ಸಂಬಂಧಿಸಿದ ವ್ಯಕ್ತಿಗೆ ಜೀವಹಾನಿಯ ಬೆದರಿಕೆಯೊಡ್ಡಿ ಪಡೆದಿದ್ದು ಡಿ) ಆಕೆಯ ಒಪ್ಪಿಗೆಯು ಆತನಿಗೆ ತಾನು ಆಕೆಯ ಗಂಡನಲ್ಲವೆಂದು ತಿಳಿದಿದ್ದರೂ ಆಕೆ ಮಾತ್ರ ಆತನೇ ತಾನು ಕಾನೂನುಬದ್ಧವಾಗಿ ಮದುವೆ ಆದ ಪತಿಯೆಂದು ತಿಳಿದಿದ್ದು ಅಥವಾ ನಂಬಿದ್ದು ಇ) ಆಕೆಯ ಒಪ್ಪಿಗೆಯು, ತಾನು ನೀಡುವ ಸಮ್ಮತಿಯಿಂದಾಗಬಹುದಾದ ಪರಿಣಾಮಗಳನ್ನು ತಿಳಿಯಲು ಅಸಮರ್ಥಕವಾದ ಮನಃಸ್ಥಿತಿಯಲ್ಲಿ ನೀಡಿದ್ದಾಗಿದ್ದು– ಅರ್ಥಾತ್ ಪಾನಮತ್ತತೆಯಿಂದ, ಬುದ್ಧಿಭ್ರಮಣೆಯಿಂದ ಅಥವಾ ಇತರ ಯಾವುದೇ ಅಂತಹ ಮನಃಸ್ಥಿತಿಯಿಂದ ದೊರೆತಿದ್ದು, ಎಫ್) ಒಪ್ಪಿಗೆ ಇದ್ದೋ ಇಲ್ಲದೆಯೋ ಆಕೆ ೧೬ ವರ್ಷದೊಳಗಿನ ಮಹಿಳೆ ಆಗಿದ್ದಲ್ಲಿ— ಹೊಂದುವ ಲೈಂಗಿಕ ಸಂಬಂಧವು ಅತ್ಯಾಚಾರದ ಅಪರಾಧ ಆಗುತ್ತದೆ. (ಇಲ್ಲಿ ೧೫ ವರ್ಷದೊಳಗಿನ ಹೆಣ್ಣನ್ನು ಮದುವೆ ಆಗಿ ಲೈಂಗಿಕ ಸಂಬಂಧ ಹೊಂದಿದಲ್ಲಿ ಅದೂ ಸಹ ಅತ್ಯಾಚಾರದ ಅಪರಾಧವೇ.) ಮತ್ತು ಸಂಭೋಗ ಕ್ರಿಯೆಯ ಪ್ರಾರಂಭಿಕ ಹಂತ ಮಾತ್ರವೂ ಸಹ ಅತ್ಯಾಚಾರದ ಅಪರಾಧವಾಗುತ್ತದೆ"

● ಶಶಿಕಲಾ ಉರಣ್ಕರ್

ಈ ಅಪರಾಧಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ, ವಿಶೇಷವಾಗಿ ಸರ್ಕಾರಿ ನೌಕರರಾಗಿದ್ದುಕೊಂಡು, ತಮಗೆ ದೊರೆತಿರುವ ಅಧಿಕಾರದ ಉಪಯೋಗ–ದುರುಪಯೋಗಗಳಲ್ಲಿ, ಸಂಬಳ, ಲಂಚ-ರುಷುವತ್ತನ್ನು ಬಳಸಿಕೊಂಡು ತನ್ನ ಕೈ ಕೆಳಗೆ ಕೆಲಸ ಮಾಡುವ ಅಥವಾ ತನ್ನ ನಿಯಂತ್ರಣದಲ್ಲಿರುವ ಅಥವಾ ಅವರುಗಳ ಸಂಬಳ–ಸಾರಿಗೆ ಸಿ.ಆರ್. ಬರೆಯುವುದು, ಅವರಿಗೆ ಲಾಭ–ಲುಕ್ಸಾನು ಮಾಡುವ ಅಧಿಕಾರ ಮುಂತಾಗಿ, ತನ್ನ ವಶದಲ್ಲಿರುವ ಅಧಿಕಾರ ಬಲದಿಂದ ಆ ಮಹಿಳೆಯರ ಒಪ್ಪಿಗೆಯನ್ನು ಪಡೆದಿದ್ದಲ್ಲಿ....ಎಂಬ ಪ್ರಶ್ನೆ ಮಹಿಳಾವಾದಿಗಳಿಂದ ಪ್ರಾರಂಭಗೊಂಡು, ೧೯೮೩ರಲ್ಲಿ (ಐ. ಪಿ. ಸಿ.) ದಂಡ ಪ್ರಕ್ರಿಯಾ ಸಂಹಿತೆ (ಐ. ಪಿ. ಸಿ.) ಕಲಂ ೩೭೬ ಕ್ಕೆ ಸೇರ್ಪಡೆಯಾಗಿ, ಸೆಕ್ಷನ್ ೩೭೬ಎ, ೩೭೬ಬಿ, ೩೭೬ ಸಿ ಮತ್ತು ೩೭೬ ಡಿ ಎಂದು ಉಪಬಂಧಗಳನ್ನು ಸೇರಿಸಲಾಗಿದೆ.

ಈ ಪ್ರಕಾರ ನಾವು ಕಾಣುವ ಲೈಂಗಿಕ ದುರುಪಯೋಗದ ಸಂಗತಿಗಳಲ್ಲಿ, ವಿಶೇಷವಾಗಿ ಸರ್ಕಾರಿ ನೌಕರನಾಗಿದ್ದು, ಪೋಲೀಸ್ ಇಲಾಖೆ, ವಿದ್ಯಾ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆಗೆ ಅನ್ವಯಿಸುವ ವಿಶೇಷ ಕಲಂಗಳು ಇವು

ಇಲ್ಲಿ ಆ ಮಹಿಳೆ ಒಪ್ಪಿಗೆ ನೀಡಿದ್ದರೂ ಸಹ ಅದು ಮುಕ್ತ ಒಪ್ಪಿಗೆ ಆಗುವುದಿಲ್ಲ ಮತ್ತು ಅತ್ಯಾಚಾರ ಪ್ರಸಂಗಗಳಲ್ಲಿ ಇಂಥ ಸರ್ಕಾರಿ ನೌಕರರಿಗೆ ೧೦ ವರ್ಷಗಳಿಗೆ ಕಡಿಮೆ ಇಲ್ಲದಂತೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಕಾನೂನು ನಿಗದಿಪಡಿಸಿದೆ. 'ಬೇಲಿಯೇ ಎದ್ದು ಹೊಲ ಮೇಯುವುದನ್ನು' ನಿಯಂತ್ರಿಸಲು ಈ ತಿದ್ದುಪಡಿ ಮತ್ತು ಉಗ್ರ ಶಿಕ್ಷೆ

ಇಲ್ಲಿ ನನ್ನ ಅಭಿಪ್ರಾಯ : ಈ ನಮ್ಮ ಲೈಂಗಿಕತ್ವದ ಬಗ್ಗೆ ಮಡಿವಂತಿಕೆಯ ನಾಟಕ ಆಡುವ ನಮ್ಮ ಸಮಾಜ (ಅಂದರೆ ನಮ್ಮ ಸಮಾಜದಲ್ಲಿನ ಜನ) ಇಂತಹ ವ್ಯಕ್ತಿಗಳನ್ನು ಕಂಡರೂ ಕಾಣದಂತೆ ಸುಮ್ಮನಿರುವುದು ಆಶ್ಚರ್ಯ ಎನ್ನಿಸುತ್ತೆ. ಇವರು ತಮ್ಮ ಹೊಲಸು ನಾಲಗೆಗೆ ಚಪ್ಪರಿಸಲೊಂದು ವಿಷಯ ಸಿಕ್ಕಿತೆಂದು ಸಂಭ್ರಮಿಸುತ್ತಾರೆಯೇ ಹೊರತು, ಇಂತಹವರ ವ್ಯವಹಾರಗಳ ಮೂಲಕ ಸಮಾಜದಲ್ಲಿ ಸೂಳೆಗಾರಿಕೆ, ಲೈಂಗಿಕ ರೋಗಗಳು, ದುಷ್ಕರ್ಮಿಗಳು, ಬಾಲಾಪರಾಧಿಗಳು ಮುಂತಾದ ತತ್ಸಂಬಂಧದ ಅಪರಾಧಗಳು ಹೆಚ್ಚಲು ತಾವು ಕಾರಣರಾಗುತ್ತೇವೆ ಎಂದು ಯಾಕೆ ಯೋಚಿಸುವುದಿಲ್ಲ ?

ಶೃಂಗೇರಿ ಕ್ಷೇತ್ರದಾದ್ಯಂತ ಇಂಥ ಹಲವಾರು 'ಕಚ್ಚೆ ಹರುಕ' ಸರ್ಕಾರಿ ನೌಕರರು ಮತ್ತು ಅವರ ಅಧಿಕಾರ ದುರುಪಯೋಗಗಳು ನಮಗೆ ತಿಳಿದು ಬರುತ್ತವೆ. ದಯವಿಟ್ಟು ಯಾವುದೇ ಮಾನವಂತ ವ್ಯಕ್ತಿ, ಅತ ರಾಜಕಾರಣಿಯೇ ಇರಲಿ, ಅಧಿಕಾರಿಯೇ ಇರಲಿ, ಯಾವುದೇ ರಾಜಕೀಯ, ಜಾತಿ, ಪಕ್ಷ, ಮತಗಳನ್ನು ಇಂತಹ ವಿಷಯಗಳಲ್ಲಿ ತಂದು (ರಾಮಕೃಷ್ಣಯ್ಯನ ವಿರುದ್ಧ 'ಜಾಗೃತಿ' ಮತ್ತಿತರ ಸಂಘಟನೆಗಳು ಕೈಗೊಂಡಿರುವಂಥ) ಪ್ರಾಮಾಣಿಕ ಯತ್ನಕ್ಕೆ ಕಲ್ಲು ಹಾಕುವುದಿಲ್ಲವೆಂದು ಆಶಿಸುತ್ತೇನೆ

ಇಂಥ ದುಷ್ಕೃತ್ಯಗಳ ವಿರುದ್ಧ ನಾವು ಕಾನೂನು ಮತ್ತಿತರ ಕ್ರಮ ಕೈಗೊಳ್ಳದಿದ್ದಲ್ಲಿ ನಾಳೆ ನಮ್ಮ-ನಿಮ್ಮ ಎಲ್ಲರ ಮನೆಯ ಹೆಣ್ಣುಗಳೂ ಇಂಥವರಿಗೆ ಬಲಿ ಆಗುವುದರಲ್ಲಿ ಸಂಶಯವಿಲ್ಲ.

● ಶಶಿಕಲಾ ಉರಣ್ಕರ್,
ನ್ಯಾಯವಾದಿ, ನ ರಾ ಪುರ.
('ಜಾಗೃತಿ')

ನಗೆ ಹನಿಗಳು

ಅಮೆರಿಕ

ಶಾಲೆಗೆ ಬಂದಿದ್ದ ತನಿಖಾಧಿಕಾರಿಗಳು ಒಬ್ಬ ಹುಡುಗನನ್ನು ಕುರಿತು, "ಲೋ ಶ್ರೀನಿವಾಸ, ಅಮೇರಿಕವನ್ನು (ಭೂಪಟದಲ್ಲಿ) ತೋರಿಸು" ಎಂದಾಗ ತೋರಿಸಿದ. ನಂತರ, ಇನ್ನೊಬ್ಬನನ್ನು, "ಪ್ರಸನ್ನ ಅಮೆರಿಕಾ ಕಂಡು ಹಿಡಿದವರು ಯಾರು ?" ಎಂದಾಗ "ಶ್ರೀನಿವಾಸ ಸಾರ್" ಎನ್ನಬೇಕೆ ?

ನೊಣ

ಪುಟ್ಟು : ಯಾಕೋ ಕಿಟ್ಟು ಅಳ್ತಾ ಇದ್ದಿ ?

ಕಿಟ್ಟು : ನಾನು ಒಂದು ನೊಣಾನ ಕೋಲಿನಿಂದ ಹೊಡೆದೆ. ಅದಕ್ಕೆ ನಮ್ಮಪ್ಪ ಹೊಡೆದರು.

ಪುಟ್ಟು : ಅದೇಕೆ ?

ಕಿಟ್ಟು : ಆ ನೊಣ ನಮ್ಮಪ್ಪನ ತಲೆ ಮೇಲಿತ್ತು.

ಲೈಟು

ಪೋಲೀಸ್ : ನಿಲ್ಲಿಸು, ಸೈಕಲ್‌ಗೆ ಲೈಟಿಲ್ಲ....

ಸೈಕಲ್ ಸವಾರ : ಅಷ್ಟೇ ಅಲ್ಲ, ಬ್ರೇಕೂ ಇಲ್ಲ !

(ಸಂಗ್ರಹ) ವೈ ಕೆ. ಶ್ರೀನಿವಾಸ. ಕೊಪ್ಪ

ಸುಧಾರಿತ ಕೃಷಿ ಉಪಕರಣಗಳು ಹಾಗೂ ಇತರ ಯಂತ್ರಗಳ ಪ್ರಾತ್ಯಕ್ಷಿಕೆ

ಕೊಪ್ಪ : ಇಲ್ಲಿನ ಕೃಷಿ ವಿಚಾರ ವಿನಿಮಯ ಕೇಂದ್ರ, ಸಿಂಡಿಕೇಟ್ ಬ್ಯಾಂಕ್, ಮತ್ತು ಜೂನಿಯರ್ ಛೇಂಬರ್ ಸಂಯುಕ್ತ ಆಶ್ರಯದಲ್ಲಿ ಜೂನ್ ೩೦ರಂದು ಪುರಭವನದಲ್ಲಿ, 'ಇನ್‌ಸ್ಟೆಂಟ್ ವಾಟರ್ ಹೀಟರ್'ನ ಪ್ರಾತ್ಯಕ್ಷಿಕೆ ನಡೆಯಿತು. ಇದರೊಂದಿಗೆ ಬೇಸಾಯಕ್ಕೆ ಸಂಬಂಧಿಸಿದ ಕೆಲ ಸುಧಾರಿತ ಉಪಕರಣಗಳ ಹಾಗೂ ಸೌರ ಒಲೆಯ ಪ್ರದರ್ಶನ ಕೂಡ ಇತ್ತು.

ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಡಿಸೈನ್ ಇಂಜಿನಿಯರ್ ಪರಮೇಶ್ವರ ಅವರು ಉಪಕರಣಗಳ ಬಗ್ಗೆ ಮಾಹಿತಿ ನೀಡಿ, ಅವುಗಳು ಕೆಲಸ ಮಾಡುವ ವಿಧಾನ ಇವುಗಳ ಬಗ್ಗೆ ತಿಳಿಸಿದರು.

ಮಲೆನಾಡಿನ ಭತ್ತ, ಕಾಫಿ, ಅಡಿಕೆ ಕೃಷಿಗೆ ಸಂಬಂಧಿಸಿದ ಹಾಗೆ ಏಲಕ್ಕಿ ಒಣಗಿಸುವ ಸುಧಾರಿತ ಕಡಿಮೆ ಖರ್ಚಿನ ಡ್ರೈಯರ್, ಬರೀ ಹೊಟ್ಟೆಗೆ ಆಗುವಂತಹ ಯಂತ್ರ ಚಾಲಿತ ನೇಗಿಲು, ಅಡಿಕೆ ಮರಕ್ಕೆ ಸುಲಭವಾಗಿ ಔಷಧಿ ಸಿಂಪಡಿಸಬಲ್ಲ ಸ್ಪ್ರೇಯರ್‌ಗಳು ಇತ್ಯಾದಿ ಸುಧಾರಿತ ಕೃಷಿ ಉಪಕರಣಗಳನ್ನು ಇಲ್ಲಿಗೆ ಸೂಕ್ತವಾಗುವ ರೀತಿಯಲ್ಲಿ ತಯಾರಿಸಿ ಕೊಡುವುದು ಸಾಧ್ಯವೆಂದು ಪರಮೇಶ್ವರ ಹೇಳಿದರು.

ಕೃಷಿ ಇಲಾಖೆ ಸ। ನಿರ್ದೇಶಕ ಶ್ರೀನಿವಾಸಯ್ಯ ರೈತರನ್ನುದ್ದೇಶಿಸಿ ಮಾತನಾಡಿದರು. ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಬಿ. ಆರ್. ಪೂಜಾರ್‌ರವರು ಸ್ವಾಗತಿಸಿ, ಹಂದಿಗೋಡು ಶ್ರೀನಿವಾಸ್ ವಂದಿಸಿದರು. ಜೇಸೀ ಅಧ್ಯಕ್ಷ ಚಂದ್ರಶೇಖರ ಆಚಾರ್ ಕಾರ್ಯಕ್ರಮ ನಿರ್ವಹಿಸಿದರು.

(ವರದಿ : ಕೆ.ಎನ್. ರಾಜೇಂದ್ರ)

ಕೊಪ್ಪ ಆಯುರ್ವೇದ ಕಾಲೇಜು ಪ್ರವೇಶಕ್ಕೆ ಅರ್ಜಿ ಆಹ್ವಾನ; ಸ್ಥಳೀಯ ವಿದ್ಯಾರ್ಥಿಗಳು ಪ್ರವೇಶದಲ್ಲಿ ಹಿಂದೇಕೆ ?

ಕೊಪ್ಪದ ಎ. ಎಲ್. ಎನ್. ರಾವ್ ಸ್ಮಾರಕ ಆಯುರ್ವೇದ ಕಾಲೇಜಿನಲ್ಲಿ ೧೯೯೧-೯೨ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಾರಂಭವಾಗಿದೆ. ಅಭ್ಯರ್ಥಿಗಳು ದ್ವಿತೀಯ ಪಿ. ಯು. ಸಿ. (ಪಿ. ಸಿ. ಬಿ. ಐಚ್ಛಿಕ) ಪರೀಕ್ಷೆಯಲ್ಲಿ ಕನಿಷ್ಠ ಶೇ. ೫೦ ರಷ್ಟು ಅಂಕಗಳನ್ನು ಪಡೆದಿರಬೇಕು. ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳು ಶೇ. ೪೫ ರಷ್ಟು ಅಂಕಗಳನ್ನು ಪಡೆದಿರಬೇಕು. ಅರ್ಜಿ ಸಲ್ಲಿಸಲು ಜುಲೈ ೧೫ರಂದು ಕಡೆಯ ದಿನವಾಗಿದ್ದು, ಅರ್ಜಿ ಮತ್ತು ವಿವರಣಾಪತ್ರವನ್ನು ಕಾಲೇಜಿನಲ್ಲಿ ಪಡೆಯಬಹುದು.

ಈ ಕಾಲೇಜು ಈಗ ಆರೂರು ಶಿಕ್ಷಣ ಸಂಸ್ಥೆಯ ಆಡಳಿತಕ್ಕೆ ಒಳಪಟ್ಟಿದ್ದು, ಕಾಲೇಜಿನ ಸಮಗ್ರ ಅಭಿವೃದ್ಧಿಗಾಗಿ ಸುಮಾರು ಹತ್ತೂವರೆ ಲಕ್ಷ ರೂಪಾಯಿಗಳ ಯೋಜನೆ ಸಿದ್ಧಪಡಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲಭ್ಯವನ್ನು ನೀಡಲಾಗುವುದು. ಚಿಕಿತ್ಸಾ ಸೌಲಭ್ಯಕ್ಕಾಗಿ ಈಗಾಗಲೇ ಕೊಪ್ಪದಲ್ಲಿ ೨೫ ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಪ್ರಾರಂಭವಾಗಿದ್ದು ಸಾರ್ವಜನಿಕರಿಗೆ ಉಚಿತವಾಗಿ ಔಷಧೋಪಚಾರ ನಡೆಸಲಾಗುತ್ತಿದೆ ದಿನಂಪ್ರತಿ ಕನಿಷ್ಠ ೮೦ರಿಂದ ೧೦೦ ಜನ ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ ಎಂದು ಪ್ರಿನ್ಸಿಪಾಲರು ತಿಳಿಸಿದ್ದಾರೆ.

ಇಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಪ್ರಥಮ ಪ್ರಾಶಸ್ತ್ಯವಿದ್ದರೂ, ಈಗಿರುವ ೭೮ಮಂದಿ ವಿದ್ಯಾರ್ಥಿಗಳಲ್ಲಿ ಕೇವಲ ಐವರು ಮಾತ್ರ ಸ್ಥಳೀಯರು. ಇನ್ನು ಮುಂದಾದರೂ ಸ್ಥಳೀಯ ವಿದ್ಯಾರ್ಥಿಗಳು ಮಲೆನಾಡಿನ ಈ ಭಾಗದ ಈ ಏಕೈಕ ಆಯುರ್ವೇದ ಕಾಲೇಜಿನ ಪ್ರಯೋಜನ ಪಡೆದುಕೊಳ್ಳಲು ಮುಂದಾಗಬೇಕು.

(ವರದಿ : ವಸಂತ್ ಕುಮಾರ್ ಹರ್ಡೀಕರ್)

“ರಾಜಕಾರಣಿಗಳ ಮೂಲಕ ಸರ್ಕಾರದೊಂದಿಗೆ ಸಂಭಾಷಿಸುವ ಪ್ರಜಾಪ್ರಭುತ್ವದ ಮೊದಲ ಪಾಠದಿಂದ ಆರಂಭಿಸೋಣ”

ವೇದಿಕೆ

ಪ್ರಿಯರೇ,

ತಾ. ೯-೬-೮೧ರ ಸಂಚಿಕೆಯ “ದೇಶದ ನೈಜ ಸ್ವಾತಂತ್ರ್ಯ....”ಲೇಖನಕ್ಕೆ ನನ್ನ ಪ್ರತಿಕ್ರಿಯೆ:—

೧. ನಮಗೆ ಬೇಕಾಗಿರುವುದು ‘ಒಟ್ಟಾರೆ ಶೋಷಣೆಯ ವ್ಯವಸ್ಥೆಯನ್ನೇ ತೊಲಗಿಸ ಬಲ್ಲ ಅಧಿಕಾರ ವ್ಯವಸ್ಥೆ’ ಎಂದಿದ್ದೀರಿ. ಇಂಥ ವ್ಯವಸ್ಥೆಯೊಂದು ಪ್ರಪಂಚದ ಇತಿಹಾಸದಲ್ಲಿ ಎಂದಾದರೂ, ಎಲ್ಲಿ ಯಾದರೂ ಅಸ್ತಿತ್ವದಲ್ಲಿದ್ದ ಉದಾಹರಣೆ ಇದೆಯೇ ? ‘ಅಧಿಕಾರ’ ಶಬ್ದವೇ ಶೋಷಣೆಯ ವಾಸನೆಯನ್ನು ಹೊರಸೂಸುವುದಿಲ್ಲವೆ?

೨. ಬಾಯಾರದ ಕುದುರೆ ನೀರು ಕುಡಿದೀತೆ? ನೀವು ಹೇಳುವ ಆದರ್ಶ ವ್ಯವಸ್ಥೆ ನಮ್ಮ ದೇಶದಲ್ಲಿ ಯಾರಿಗೆ ಬೇಕಾಗಿದೆ? ಶ್ರೀಮಂತ ವರ್ಗದ ಕೈಯಲ್ಲಿ ಸ್ವಾತಂತ್ರ್ಯದ ಹಣ್ಣು ಇದೆ. ಆದ್ದರಿಂದ ಬದಲಾವಣೆ ಅವರಿಗೆ ಬೇಡ. ಬದಲಾಯಿಸಲು ಹೊರಡುವವರಿಗೆ ಅವರು ಪೆಟ್ಟು ಕೊಡುವುದು ಖಂಡಿತ. ಮಧ್ಯಮ ವರ್ಗದ ಬಹುಸಂಖ್ಯಾತರು ಇದ್ದದ್ದರಲ್ಲಿ ತೃಪ್ತರು ; ಬದಲಾವಣೆ ಬಂದರೂ ಬರದಿದ್ದರೂ ಅವರ ಜೀವನ ಶೈಲಿ ಬದಲಾಗುವುದು ಅಷ್ಟರಲ್ಲಿಯೇ ಇದೆ. ಅವರ ಪೈಕಿ ಅಲ್ಪ ಸಂಖ್ಯೆಯ ಕೆಲವೇ ಜನರು ಬೌದ್ಧಿಕ ಮತ್ತು ಮಾನವೀಯ ಕಾರಣಗಳಿಗಾಗಿ ಬದಲಾವಣೆಯನ್ನು ಬಯಸುತ್ತಾರೆ. ಇವರ ವಿಷಯಕ್ಕೆ ಮತ್ತೆ ಬರುತ್ತೇನೆ. ಇನ್ನು, ಬಡ ವರ್ಗದ ಜನರಿಗೆ ಅವರ ಜೀವನ ಮಟ್ಟದ ಕಾರಣದಿಂದಾಗಿ ಬದಲಾವಣೆ ಬೇಕು ಎಂದು ನಂಬೋಣ. ಒಟ್ಟಿನಲ್ಲಿ ಇವರ ಸಂಖ್ಯೆ ಬಲು ದೊಡ್ಡದು. ಆದರೆ ಬದಲಾವಣೆಗಾಗಿ ಸ್ವತಃ ಪ್ರಯತ್ನಿಸುವಷ್ಟು ಇವರು ಶಕ್ತರಲ್ಲ.

ಆದ್ದರಿಂದ ಭಾರತದಲ್ಲೊಂದು ಶೋಷಣಾರಹಿತ ಅಧಿಕಾರ ವ್ಯವಸ್ಥೆ ಸ್ಥಾಪನೆಯಾಗಬೇಕೆಂದು ಪ್ರಯತ್ನಿಸಬಲ್ಲವರು ನನಗೆ ಕಾಣುವಂತೆ ಶೇ. ೧ ರಷ್ಟು ಇಲ್ಲ.

ವಿದ್ಯಾವಂತ ಮಧ್ಯಮ ವರ್ಗದಲ್ಲಿ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಹಾಗೂ ಮೇಲು ವರ್ಗ ಮತ್ತು ಕೆಳವರ್ಗಗಳಲ್ಲಿ ಅಲ್ಲಲ್ಲಿ ಚದರಿದಂತೆ ಅಲ್ಪ ಸಂಖ್ಯೆಯಲ್ಲಿ ಇರುವ ಬದಲಾವಣೆ ಬಯಸುವವರಲ್ಲಿ ನೀವು ಹೇಳುವ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಪರಿಸರ ಚಳುವಳಿಗಾರರು, ಭಾಷಾ ಚಳುವಳಿಗಾರರು, ಕಲೆ–ಸಾಂಸ್ಕೃತಿಕ ಚಳುವಳಿಗಾರರು ಎಲ್ಲರೂ ಸೇರಿ ಹೋಗಿದ್ದಾರೆ. ಎಷ್ಟೋ ಸಲ ಇಲ್ಲಿ ಕಂಡ ಮುಖಗಳೇ ಅಲ್ಲೂ ಕಂಡರೆ ಆಶ್ಚರ್ಯವಿಲ್ಲ. (ಒಬ್ಬರೇ ಸಿರಿಮನೆ ನಾಗರಾಜ್ ಗುಬ್ಬಿಗದ್ದೆಯಲ್ಲಿ ಪರಿಸರವಾದಿ, ಕನ್ನಡ ಅಂಕೆಗಳನ್ನು ಬಳಸುವಲ್ಲಿ ಭಾಷಾ ಚಳುವಳಿಗಾರ, ಬಸ್ ಕಾರ್ಮಿಕರ ಹೋರಾಟದಲ್ಲಿ ಕಾರ್ಮಿಕರ ಪರ ನಿಲ್ಲುವ ವ್ಯಕ್ತಿ ಆಗಿಲ್ಲವೆ? ಹಾಗೆ.)

೩. ನೀವು ‘ರಕ್ತ ತರ್ಪಣ’ದ ಅರ್ಥಾತ್ ಹಿಂಸೆಯ ಮಾತು ಆಡುತ್ತೀರಿ. ನಮ್ಮ ಸ್ವಾತಂತ್ರ್ಯ ಸಂಗ್ರಾಮ ಕೇವಲ ಉಪವಾಸ ಸತ್ಯಾಗ್ರಹಗಳ ಚರಿತ್ರೆಯಲ್ಲ ಎಂಬುದು ನಿಜವೇ. ಗಾಂಧಿ ದ. ಆಫ್ರಿಕಾದಿಂದ ಭಾರತಕ್ಕೆ ಮರಳಿ ಬಂದು ತನ್ನ ಹೋರಾಟದ ದಾರಿಯನ್ನು ಇನ್ನೂ ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಕಾಲದಲ್ಲಿ ಭಗತ್ ಸಿಂಗ್ ಅಖಿಲ ಭಾರತದಲ್ಲಿ ಪ್ರಸಿದ್ಧರಾಗಿದ್ದರು. ಸ್ವಾತಂತ್ರ್ಯದ ಇತಿಹಾಸ ಬರೆದವರ ಅಭಿಪ್ರಾಯದಂತೆ ಗಾಂಧಿಯ ಹೆಚ್ಚುಗಾರಿಕೆ ಇರುವುದು ಜನತೆಯನ್ನು ಆತ ತನ್ನೊಂದಿಗೆ ಕರೆದೊಯ್ಯುವ ಶಕ್ತಿ ಪಡೆದಿದ್ದರು ಎಂಬುದರಲ್ಲಿ. ಸ್ವಂತ ಜೀವನವನ್ನು ತ್ಯಾಗ ಮಾಡಲು ಭಗತ್‌ಸಿಂಗ್ ಅಳುಕಲಿಲ್ಲ ಎಂಬುದು ನಿಜ ಆದರೆ ನನ್ನ ಮಟ್ಟಿಗೆ ದೇಶಕ್ಕಾಗಿ ಸಾಯುವುದಕ್ಕಿಂತ ದೇಶಕ್ಕಾಗಿ ಬದುಕುವುದು ಹೆಚ್ಚು ಮಹತ್ವದ ವಿಚಾರ.

ಹಿಂಸೆಯ ಮೂಲಕ ಕಾರ್ಯಸಾಧನೆ ಮಾಡುವುದರ ಸಾಧ್ಯಾಸಾಧ್ಯತೆಗಳನ್ನೂ ನಾವು ಅರ್ಥಮಾಡಿಕೊಳ್ಳಬೇಕು ಕತ್ತಿ, ಕೋಲುಗಳು ಇಂದಿನ ಕಾಲದಲ್ಲಿ ಪ್ರಯೋಜನಕ್ಕೆ ಬರಲಾರವು; ದೂರ ನಿಯಂತ್ರಣದ ಬಾಂಬುಗಳಂಥ ಆಯುಧಗಳು ಬೇಕಾಗಬಹುದು ಇವುಗಳನ್ನು ಒಟ್ಟುಹಾಕುವ ಬಗೆ ಹೇಗೆ? ಸಂಪನ್ಮೂಲ ಎಲ್ಲಿಂದ? ಕಾರ್ಯಗತ ಮಾಡಬಲ್ಲ ಯೋಧರು ಯಾರು? ‘ಹಿಟ್‌ಲಿಸ್ಟ್’ ತಯಾರಾಗಬೇಡವೆ? ಅದನ್ನು ತಯಾರಿಸುವವರು ಯಾರು? (ಕ್ರೈಸ್ತ ಹೇಳಿದನಂತೆ : ‘ಒಂದು ತಪ್ಪನ್ನೂ ಮಾಡದವನು ಮೊದಲ ಕಲ್ಲನ್ನು ಹೊಡೆಯಲಿ’) ಈ ನಡುವೆ ಕಾರ್ಯಾಚರಣೆಯನ್ನು ರಹಸ್ಯವಾಗಿಡಬೇಡವೆ? ಹಾಗೆ ರಹಸ್ಯವಾಗಿಟ್ಟರೆ, ‘ಜನತೆಯ ಪ್ರಜಾಪ್ರಭುತ್ವ’ದ ಸ್ಥಾಪನೆಯು ಪುನಃ ಕೆಲವೇ ಮಂದಿಯ ಗುತ್ತಿಗೆಯಾಗುವ ವಿರೋಧಾಭಾಸ ಎದುರಾಗುವುದಿಲ್ಲವೆ?

೪. ಉಗ್ರ ಹೋರಾಟ’ದ ಮೂಲಕವೇ ಸಮಸ್ಯೆಗಳು ಪರಿಹಾರವಾಗುವ ಬಗ್ಗೆ: ನಿಮ್ಮ ಪತ್ರಿಕೆಯು ಅದೇ (೯-೬-೮೧ರ) ಸಂಚಿಕೆಯಲ್ಲಿ, ವಿದ್ಯುತ್ ಮಂಡಳಿಯ ನಿರುಪಯುಕ್ತತೆ ಬಗ್ಗೆ ನ. ರಾ. ಪುರ ಬಂದ್ ಆದ ವರದಿಯನ್ನೂ ಪ್ರಕಟಿಸಿದ್ದೀರಿ. ‘ಬಂದ್’ ಎಂಬುದೂ ‘ಉಗ್ರ ಹೋರಾಟ’ದ ಒಂದು ಬಗೆಯಷ್ಟೆ?

ವಿದ್ಯುತ್ತಿನ ಸಮಸ್ಯೆಯು ನ. ರಾ. ಪುರಕ್ಕೆ ಮಾತ್ರ ಸಂಬಂಧ ಪಟ್ಟದ್ದಲ್ಲ; ಇಡೀ ಕರ್ನಾಟಕದಲ್ಲಿ ವಿದ್ಯುತ್ತಿನ ಪರಿಸ್ಥಿತಿ ಹೀಗೆಯೇ ಇದೆ. ಪ್ರತಿನಿತ್ಯವೂ ನೀಡಲಾಗುತ್ತಿರುವ ಹೊಸ ಹೊಸ ವಿದ್ಯುತ್ ಸಂಪರ್ಕಗಳಿಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆ ಹೆಚ್ಚುತ್ತಿಲ್ಲ. ಇತ್ತೀಚೆಗೆ ನಮ್ಮ ಮುಖ್ಯ ಮಂತ್ರಿಗಳು ೫೦,೦೦೦ ಪಂಪು ಸೆಟ್‌ಗಳಿಗೆ ಸಂಪರ್ಕ ನೀಡುವ ಘೋಷಣೆ ಮಾಡಿದ್ದಿದೆ. ಆದರೆ, ಅದಕ್ಕೆ ಬೇಕಾದ ವಿದ್ಯುತ್ತು ಎಲ್ಲಿಂದ ಬರುತ್ತದೆ ಎಂಬುದನ್ನು ಅವರು ವಿವರಿಸಲಿಲ್ಲ ; ಅಷ್ಟು ಸಂಪರ್ಕಗಳಿಗೆ ತಕ್ಕಂತೆ ಬೇಕಾಗುವ ಸಿಬ್ಬಂದಿಯ ಬಗೆಗೂ ಮಾತಾಡಲಿಲ್ಲ. ಪ್ರಜೆಗಳೂ, ಪ್ರಭುಗಳೂ ಆದ ನಾವು ಯಾರಾದರೂ– ನ. ರಾ ಪುರದಲ್ಲಿ ಮೆರವಣಿಗೆ ಮಾಡಿದ ೨೦೦೦ ಜನರಲ್ಲಿ ಕನಿಷ್ಠ ೨ ಜನರಾದರೂ– ಮುಖ್ಯಮಂತ್ರಿಗಳ ಈ ಘೋಷಣೆಯ ಸಾಧ್ಯಾಸಾಧ್ಯತೆಯನ್ನೂ, ಲೆಕ್ಕಾಚಾರವನ್ನೂ ಅವರಿಗೊಂದು ಪತ್ರ ಬರೆದು ಕೇಳಿದ್ದಿದೆಯೆ?

ಅಂದಿನ ಸಭೆಯಲ್ಲಿ ಜನತೆಯ ಒತ್ತಡಕ್ಕೆ ಒಳಗಾದ ಕ. ವಿ. ಮಂ. ಅಧಿಕಾರಿಗಳು ಯಾವ ಆಧಾರದಿಂದ ಆಶ್ವಾಸನೆ ನೀಡಿದರೋ ನನಗೆ ತಿಳಿಯದು. ಏಕೆಂದರೆ ಮಂಡಳಿಯಲ್ಲಿ ಸುಮಾರು ಹತ್ತು ವರ್ಷಗಳಿಂದೀಚೆಗೆ ಹೊಸ ಸಿಬ್ಬಂದಿಗಳ ನೇಮಕಾತಿ ನಡೆದಿಲ್ಲ. ಈ ಅವಧಿಯಲ್ಲಿ ಅದೆಷ್ಟೋ ಮಂದಿ ನಿವೃತ್ತರಾಗಿ ಹೋಗಿದ್ದಾರೆ. ಪ್ರತಿನಿತ್ಯ ನೀಡಲಾಗುತ್ತಿರುವ ಹೊಸ ಸಂಪರ್ಕಗಳಿಗೆ ಸಂಬಂಧಿಸಿದ ಖಾತೆಗಳನ್ನು ಸಹ ಸಕಾಲಕ್ಕೆ ತೆರೆಯುವುದು ಸಾಧ್ಯವಾಗುತ್ತಿಲ್ಲ. ಕ.ವಿ.ಮಂ ಕಛೇರಿಗಳಲ್ಲಿ ಕೇವಲ ಸ್ಥಳಾಭಾವದ ಸಮಸ್ಯೆಯನ್ನೇ ಬಗೆಹರಿಸಲು ಮಂಡಳಿಗಳಿಗೆ ದುಸ್ತರವೆನ್ನುವಂಥ ಪರಿಸ್ಥಿತಿ ಇದೆ. ಅಭಿವೃದ್ಧಿ ಕಾರ್ಯಗಳಿಗೆ ಬೇಕಾದ ವಸ್ತುಗಳ ತೀವ್ರ ಕೊರತೆ ಇದೆ. ಇಲಾಖೆಯೇ ನಿರ್ವಹಿಸಬೇಕಾದ ಕೆಲಸಗಳನ್ನು ಕಂಟ್ರಾಕ್ಟರುಗಳಿಗೆ ವಹಿಸಿಕೊಡುವ ಪದ್ಧತಿ ಜಾರಿಗೊಂಡಿದೆ. ಪರಿಸ್ಥಿತಿ ಹೀಗಿರುವಾಗ ಕ.ವಿ.ಮಂ ಅಧಿಕಾರಿಗಳು ಕೊಟ್ಟಿರುವ ಆಶ್ವಾಸನೆ ಕಾರ್ಯಗತವಾದೀತೆಂದು ಹೇಗೆ ನಂಬೋಣ?

‘ಬಂದ್’ನಂಥ ‘ಉಗ್ರ ಹೋರಾಟ’ ಈ ಸಮಸ್ಯೆಯನ್ನು ಹೇಗೆ ಪರಿಹರಿಸುತ್ತದೆ ಎಂದು ನೀವು ಭಾವಿಸುತ್ತೀರಿ ? “ಓಟು ಕೊಟ್ಟರೆ ನಮ್ಮ ಕೆಲಸ ಮುಗಿಯಿತು” ಎಂದು ತಿಳಿದು ಸುಮ್ಮನೆ ಕೂತದ್ದರಿಂದ ಬೆಳೆದು ನಿಂತಿರುವ ಸಮಸ್ಯೆ ಇದಲ್ಲವೆ ? ಯಾರನ್ನು ಉಚ್ಚಿ ಹೊಯ್ಯಲಿ ಬಿಡದೆ ಕೂಡಿ ಹಾಕಿದರೆ, ಯಾರನ್ನು ಸಾರ್ವಜನಿಕವಾಗಿ ‘ಛೀ ಥೂ’ ಎಂದು ಉಗುಳಿದರೆ, ಯಾರ ರಕ್ತ ಹರಿಸಿದರೆ, ಈ ಸಮಸ್ಯೆ ಪರಿಹಾರವಾಗಬಹುದು ?

ನನಗಂತೂ ಪ್ರಜಾಪ್ರಭುತ್ವವೆಂಬುದು ಮಾನವ ರೂಪಿಸಿದ ಅತ್ಯುತ್ತಮ ರಾಜಕೀಯ ವ್ಯವಸ್ಥೆಯಾಗಿ ಕಾಣುತ್ತದೆ. ಅಂಬೇಡ್ಕರ್‌ರಂಥ ಧೀಮಂತರು ನಮ್ಮ ಸಂವಿಧಾನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆಂಬುದನ್ನು ನೆನಪಿಡೋಣ. ಅದನ್ನು ‘ಬ್ರಿಟಿಷರ ಎಂಜಲು’ ಎನ್ನುತ್ತಾರೆ ಶೃಂಗೇರಿಯ ‘ಶೃಂಗ’ರು. (ಅದೇ ಸಂಚಿಕೆಯಲ್ಲಿನ ಪತ್ರದಲ್ಲಿ.) ಭಾರತಕ್ಕೆ ಬ್ರಿಟಿಷರು ಬರುವ ಪೂರ್ವದಲ್ಲಿ ಇಲ್ಲಿ ಅಂತಹ ಅತ್ಯುತ್ತಮ ಆಡಳಿತ ವ್ಯವಸ್ಥೆ ಏನೂ ಇದ್ದಿರಲಿಲ್ಲ. ಸಣ್ಣ ಪಾಳೆಯಗಾರರು, ಸ್ವಲ್ಪ ದೊಡ್ಡ ರಾಜರು—ಒಟ್ಟಿನಲ್ಲಿ ರಾಜರ ಆಳ್ವಿಕೆಯನ್ನು ಒಪ್ಪಿಕೊಂಡಿದ್ದವರು ನಾವು. ಪ್ರಜಾಪ್ರಭುತ್ವವನ್ನು ಬ್ರಿಟಿಷರ ಎಂಜಲು ಎನ್ನುವುದಾದರೆ, ಕಮ್ಯುನಿಸಮ್ಮೂ ವಿದೇಶೀ ಕಲ್ಪನೆಯೇ; ನಮ್ಮದು ‘ರಾಮರಾಜ್ಯ’ದ ಕಲ್ಪನೆ ಎನ್ನೋಣವೇ ? (‘ರಾಮರಾಜ್ಯ’ ಎಂದು ಜೋರಾಗಿ ಕೂಗೆಬ್ಬಿಸುತ್ತಿರುವವರು ಪುನಃ ಅರಸೊತ್ತಿಗೆಯನ್ನೇ ಆತುಕೊಳ್ಳಲು ಹಾಗೆ ಕೂಗೆಬ್ಬಿಸುತ್ತಿರುವರೋ ! ಎಂಬ ಗುಮಾನಿಗೆ ಅವಕಾಶವಾಗುವಂತೆ ವರ್ತಿಸುತ್ತಿದ್ದಾರೆ)

ಅರಸೊತ್ತಿಗೆಯಲ್ಲಿ ಬದುಕಿ ಅಭ್ಯಾಸವಾಗಿ ಹೋದ ನಮಗೆ ಪ್ರಜಾಪ್ರಭುತ್ವವನ್ನು ರೂಢಿಸಿಕೊಳ್ಳುವುದು ಕಷ್ಟವಾಗುತ್ತಿದೆ. ಆಡಳಿತದಲ್ಲಿ ಪ್ರತಿಯೊಬ್ಬನೂ ಸಕ್ರಿಯವಾಗಿ ಪಾತ್ರ ವಹಿಸಬೇಕೆಂಬ ಪ್ರಜಾಪ್ರಭುತ್ವದ ಮೊದಲ ಪಾಠವೇ ನಮ್ಮ ವಿದ್ಯಾವಂತರಿಗೂ, ಬದಲಾವಣೆ ಬಯಸುವ ಬುದ್ಧಿವಂತರಿಗೂ ಅರ್ಥಹೀನವಾಗಿ ಕಾಣುತ್ತಿದೆ; ಅಥವಾ ಅವರಿಗೆ ಆ ಪಾಠವೇ ಗೊತ್ತಿಲ್ಲ. ನಮ್ಮ ಪ್ರಜ್ಞಾವಂತರಾದ ವಿದ್ಯಾವಂತರು ಸಹ ಸಾರ್ವಜನಿಕ ವಿಷಯಗಳ ಬಗೆಗಿನ ತಮ್ಮ ಅಭಿಪ್ರಾಯವನ್ನು ಶಾಸಕರಿಗೆ ಬರೆಯುವ ಮೂಲಕ ಸರ್ಕಾರಕ್ಕೆ ಮುಟ್ಟಿಸುವ ಪರಿಪಾಠ ಇಟ್ಟುಕೊಂಡಿಲ್ಲ. ಎಷ್ಟೋ ಶಾಸಕರಿಗೆ ತಮ್ಮ ಕ್ಷೇತ್ರದ ಮುಖ್ಯ ಕೇಂದ್ರಗಳಲ್ಲಿ ಕಛೇರಿಯೇ ಇಲ್ಲ; ಕಾಲಕಾಲಕ್ಕೆ ಜನರನ್ನು ಸಂಪರ್ಕಿಸುವ ಅಭ್ಯಾಸವೂ ಇಲ್ಲ. ಇದೆಲ್ಲ ಬೇಕು ಎಂದು ಜನರಿಗೆ ಅನ್ನಿಸಬೇಕು ತಾನೆ ? ಕೊನೆಯ ಪಕ್ಷ ಬದಲಾವಣೆ ಬಯಸುವ ಶೇ ೧ರಷ್ಟು ಜನರಾದರೂ ಬರವಣಿಗೆಯ ಮೂಲಕ ಶಾಸಕರಿಗೆ ನಮ್ಮ ಅಭಿಪ್ರಾಯವನ್ನು ತಿಳಿಸುವ ಕೆಲಸ ಮಾಡುತ್ತಿದ್ದೇವೆಯೇ ? ಸಾರಾಸಗಟಾಗಿ ಎಲ್ಲ ರಾಜಕಾರಣಿಗಳನ್ನೂ ದುಷ್ಟರು, ಭ್ರಷ್ಟರು, ಲಫಂಗರು ಎಂದಿತ್ಯಾದಿಯಾಗಿ ಬೈಯುವುದರಲ್ಲೇ ನಮ್ಮ ಸಮಯ ಕಳೆದು ಹೋಗುತ್ತಿದೆ. ಆರಿಸಿ ಕಳಿಸಿದ ಶಾಸಕರು ಭ್ರಷ್ಟರಾದರೆ ಅವರಿಗೆ ಓಟು ಕೊಟ್ಟ ನಾವು ಸಜ್ಜನರೆನ್ನುವಂತಿದೆಯೆ ?

ಬಂದ್ ಇತ್ಯಾದಿ ‘ಉಗ್ರ ಹೋರಾಟ’ಗಳ ಬದಲು ನಾವು ಹೆಚ್ಚು ಹೆಚ್ಚು ಜನರು

(೪ನೇ ಪುಟಕ್ಕೆ)

ನ್ಯಾಯಯುತ, ಸರಳ ಚುನಾವಣಾ ವ್ಯವಸ್ಥೆ ಹಾಗೂ ಬಿಗಿ ನ್ಯಾಯಾಂಗ ವ್ಯವಸ್ಥೆ ನಮಗೀಗ ಬೇಕು

ವೇದಿಕೆ

ಪ್ರಿಯರೆ,

ಇಂದಿನ ದುಷ್ಟ ವ್ಯವಸ್ಥೆಯನ್ನು ಕಂಡು, ಅದರಲ್ಲಿ ನಂಬಿಕೆಯನ್ನೇ ಕಳೆದುಕೊಂಡು, ಸಿಟ್ಟು–ಸೆಡವು–ತಿರಸ್ಕಾರಗಳು ಎದೆಯಾಳದಿಂದ ಸ್ಫೋಟಗೊಂಡು ಜ್ವಾಲಾಮುಖಿಯಂತೆ ಹೊರ ಬಂದ ತೀವ್ರ ಆಕ್ರೋಶದಿಂದ ಕೂಡಿದಲೇಖನ ("ಚುನಾವಣೆ"....)

ನಮ್ಮ ರಾಜಕೀಯ ವ್ಯವಸ್ಥೆ ಎಷ್ಟು ಕುರೂಪಗೊಂಡಿದೆಯೆಂದರೆ ಇಂದು ಭಾರತ ದೇಶದಲ್ಲಿರುವುದು ಪ್ರಜಾಪ್ರಭುತ್ವದ ವಿಡಂಬನೆ ಮಾತ್ರ. ಅದರಲ್ಲೂ ಕಳ್ಳರು, ಕೊಲೆಗಡುಕರು, ಡಕಾಯಿತರು ಜನನಾಯಕರಾಗುತ್ತಿರುವುದು, ನಮ್ಮ ವ್ಯವಸ್ಥೆ ಅವರಿಗೆ ಜೈಕಾರ ಹಾಕುತ್ತಿರುವುದನ್ನು ಕಂಡಾಗ ಈ ಆಕ್ರೋಶ ಸಹಜ ಆದರೆ ನರಸತ್ತ ನಮ್ಮ ದೇಶದ ಜನರ ರಕ್ತದಲ್ಲೇ ಸಹಸ್ರಾರು ವರ್ಷಗಳಿಂದ ಈ ಗುಲಾಮಗಿರಿಯ ವ್ಯವಸ್ಥೆ ಹರಿದು ಬಂದಿರುವುದರಿಂದ ಬದಲಾವಣೆ ನಿರೀಕ್ಷಿಸುವುದು ಒಂದು ಮೂರ್ಖತನವಾದೀತೇನೋ ?

ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯ ಕೊಡುವುದನ್ನು ಬಲವಾಗಿ ವಿರೋಧಿಸಿದವರಲ್ಲಿ ವಿನ್‌ಸ್ಟನ್ ಚರ್ಚಿಲ್ ಒಬ್ಬರು. ಭಾರತೀಯರು ಸ್ವತಂತ್ರ ಭಾರತದ ವ್ಯವಹಾರಗಳನ್ನು ನಿರ್ವಹಿಸಲು ಅಸಮರ್ಥರು ಎನ್ನುವುದು ಅವರ ನಂಬಿಕೆ. ಈ ಬಗ್ಗೆ ಬ್ರಿಟನ್ನಿನ ಹೌಸ್ ಆಫ್ ಕಾಮನ್ಸ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಚರ್ಚಿಲ್, ಲೇಬರ್ ಸರ್ಕಾರದ ನಿಲುವನ್ನು ಕಟುವಾಗಿ ಟೀಕಿಸಿದ್ದರು "ಭಾರತದಲ್ಲಿ ಅಧಿಕಾರವೆನ್ನುವುದು ತಸ್ಕರು, ಅಯೋಗ್ಯರು, ಅಸಮರ್ಥರ ಕೈಗೆ ಹೋಗುತ್ತದೆ ಇದರಿಂದ ಒಂದು ಬಾಟಲು ನೀರಾಗಲೀ, ಒಂದು ತುಂಡು ಬ್ರೆಡ್ ಆಗಲೀ (ಒಂದು ತುತ್ತು ಅನ್ನ?) ತೆರಿಗೆಯಿಂದ ಮುಕ್ತವಾಗಿರುವುದಿಲ್ಲ. ಸ್ವತಂತ್ರ ಭಾರತದಲ್ಲಿ ಬರೀ ಗಾಳಿ ಮಾತ್ರ ಪುಕ್ಕಟೆಯಾಗಿರುತ್ತದೆ. (ಈಗ ಇದಕ್ಕೂ ಸಂಚಕಾರ ಬಂದಿದೆ.) ಈ ನಾಯಕರುಗಳು ಅತೀ ಕ್ಷುದ್ರ ಜನ. ಅವರವರಲ್ಲಿಯೇ ಹೊಡೆದಾಡಿಕೊಳ್ಳುತ್ತಾರೆ ಮತ್ತು ಭಾರತ ರಾಜಕೀಯ ಕಚ್ಚಾಟದಲ್ಲಿ ನಾಶವಾಗಿ ಹೋಗುತ್ತದೆ"

ಇದೇನೂ ಭವಿಷ್ಯವಾಣಿಯಾಗಿರಲಿಲ್ಲ. ಈ ದೇಶದ ಇತಿಹಾಸವನ್ನು ಕೂಲಂಕಷ ಅಧ್ಯಯನ ಮಾಡಿದ ಯಾವನಾದರೂ ಈ ರೀತಿ ಹೇಳಬಲ್ಲ. ದುರದೃಷ್ಟವಶಾತ್ ಚರ್ಚಿಲ್‌ರ ಮಾತುಗಳು ಇಂದು ನಿಜವಾಗುತ್ತಿವೆ. ಸಿನಿಕತನದ, ಭಾವಾವೇಗದ, ಅಜ್ಜನ ಕಾಲದ ವೈಭವವನ್ನೇ ಹೊಗಳುತ್ತಾ ಕೂರುವ ಭಾರತೀಯ, ಕೇವಲ ಶೇ. ೧೫ ಭಾಗದ ಮೇಲ್ವರ್ಗದ ಜನರಿಂದ ಆಳಲ್ಪಟ್ಟ ಪುರಾಣ ಹಾಗೂ ಇತಿಹಾಸದ ಭಾರತೀಯ, ಅಷ್ಟೇ ಅಲ್ಪ ಸಂಖ್ಯೆಯಲ್ಲಿ ಬಂದ ಮೊಗಲರಿಂದ ಆಳಲ್ಪಟ್ಟ ಮೇಲು ವರ್ಗವೂ ಸೇರಿದ ಭಾರತೀಯ, ಅದಕ್ಕಿಂತಲೂ ಅಲ್ಪ ಸಂಖ್ಯೆಯಲ್ಲಿ ಬಂದ ಬ್ರಿಟಿಷರಿಂದ ಆಳಲ್ಪಟ್ಟ ಈ ಎಲ್ಲಾ ಜನಾಂಗಗಳ ಭಾರತವನ್ನು ನೋಡಿದಾಗ, ಚರಿತ್ರೆಯ ಕಾಲದಿಂದಲೂ ಇಲ್ಲಿನ ಜನರಿಗೆ ತನ್ನತನವೇ ಇಲ್ಲ. ಈಗ ದಿಢೀರಾಗಿ, ಕೇವಲ ೪೫ ವರ್ಷಗಳಲ್ಲಿ ಆ ತನ್ನ ತನ ನಿರೀಕ್ಷಿಸುವುದು ಸರಿಯಲ್ಲ. ಹಾದರದ ಕಥೆ, ಸೋದರರ ವಧೆಯನ್ನು ಪುಣ್ಯ ಕತೆಯೆಂದು ಪಠಿಸುವ ಜನರಿಂದ ವೈಚಾರಿಕತೆಯನ್ನು ನಿರೀಕ್ಷಿಸುವುದು ತುಂಬಾ ತಪ್ಪಾದ ಲೆಕ್ಕಾಚಾರ. ಇದು ನಮ್ಮ ದೇಶದ 'ಪ್ರಜಾಪ್ರಭು' ನಡೆದು ಬಂದ ದಾರಿ. ಈಗ ಈತನೆದುರು ಚುನಾವಣೆಗಳು ಜಾತಿಯನ್ನು, ದೇವರುಗಳನ್ನು, ಹೆಂಡ–ಸಾರಾಯಿಗಳನ್ನು ತಂದು ಇಡೀ ಚುನಾವಣಾ ವ್ಯವಸ್ಥೆಯನ್ನು, ಅದರ ಅರ್ಥವನ್ನು ಧ್ವಂಸಗೊಳಿಸುವ ಮೂಲಕ ಈ ದೇಶದ ನಾಶಕ್ಕೆ ನಮ್ಮ ದೇಶದ ಈ ವ್ಯವಸ್ಥೆ ಹೊರಟಿದೆ ಎನ್ನಬೇಕು.

ಬ್ರಿಟಿಷ್ ಪಾರ್ಲಿಮೆಂಟರಿ ವ್ಯವಸ್ಥೆಯನ್ನು ಸ್ಕಾಟಿಷ್ ತತ್ವಜ್ಞಾನಿ ಕಾರ್ಲೈಲ್ ಅವರು "ಮಾತಿನ ಅಂಗಡಿ" ಎಂದು ಕರೆದಿದ್ದಾರೆ. ಅದು ಭಾರತಕ್ಕೆ ಹೊಂದುವ ಪಾರ್ಲಿಮೆಂಟರಿ ವ್ಯವಸ್ಥೆ ಅಲ್ಲವೆಂದು

ಕೃಷ್ಣ ಭಂಡಾರಿ, ಬೆಂಗಳೂರು.

ಗಾಂಧೀಜಿ ಮನಗಂಡಿದ್ದರು. ಆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವ ಯತ್ನಗಳನ್ನು ಅವರು ವಿರೋಧಿಸಿದ್ದರು. ಕಾರ್ಲೈಲ್ ಮಾತನ್ನು ಸಮರ್ಥಿಸಿ ತಮ್ಮ ನಿಯತಕಾಲಿಕ 'ಹಿಂದ್ ಸ್ವರಾಜ್'ನಲ್ಲಿ ಬ್ರಿಟಿಷ್ ವ್ಯಾಪಾರಿ ಜನತಂತ್ರ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿ ಬರೆದರು. "ಒಂದು ವೇಳೆ ನಾವೇನಾದರೂ ವೆಸ್ಟ್‌ಮಿನ್ಸ್ಟರ್ ವಿಧಾನವನ್ನು ಅಳವಡಿಸಿಕೊಂಡದ್ದೇ ಆದರೆ ಖರೀದಿ–ಮಾರಾಟಕ್ಕೆ ಒದಗುವ ವೇಶ್ಯೆಯನ್ನು ಕರೆದುಕೊಂಡಂತಾಗುತ್ತದೆ" ಎಂದೂ ಬಾಪೂಜಿ ಕಟು ಶಬ್ದಗಳಲ್ಲಿ ಎಚ್ಚರಿಸಿದ್ದರು. ಗಾಂಧೀಜಿ ಅಂದು ಹೇಳಿದ ಮಾತು ಇಂದು ನಿಜವಾಗುತ್ತಿದೆ.

ಹಳೆಯದು ಏನೇ ಇರಲಿ, ನವ ಭಾರತದ ಪರಿಸ್ಥಿತಿ ಈ ರೀತಿ ಆಗಲು ಮುಖ್ಯ ಕಾರಣ ನಮ್ಮ ಅಸಮರ್ಪಕ ಚುನಾವಣಾ ವ್ಯವಸ್ಥೆ ಹಾಗೂ ನ್ಯಾಯಾಂಗ ವ್ಯವಸ್ಥೆ. "೧೦೦ ಅಪರಾಧಿಗಳು ತಪ್ಪಿಸಿಕೊಂಡರೂ ಚಿಂತಿಲ್ಲ; ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದು" ಎಂಬ ವಿಶಾಲ ಧೋರಣೆಯಿಂದ ಇಂದು, ಕಳ್ಳರು, ರೌಡಿಗಳು, ಡಕಾಯಿತರು ಮುಂತಾದ ಸಮಾಜ ವಿರೋಧಿಗಳು ಜನಪ್ರತಿನಿಧಿಗಳಾಗುವ, ನಮ್ಮನ್ನು ಆಳುವ ಮಟ್ಟಕ್ಕೆ ಬಂದಿದೆ. ಕೇವಲ ಶೇ. ೨೫ಕ್ಕಿಂತ ಕಡಿಮೆ ಮತ ಪಡೆದರೂ ಜನನಾಯಕನ ಆಯ್ಕೆ ಆಗುತ್ತದೆ; ಅವನು ನಮ್ಮನ್ನು ಆಳುತ್ತಾನೆ.

ಆದ್ದರಿಂದ ನಮಗೆ ಈಗ ಮುಖ್ಯವಾಗಿ ಬೇಕಾಗಿರುವುದು ನಮ್ಮ ಚುನಾವಣಾ ಹಾಗೂ ನ್ಯಾಯಾಂಗ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ. ಇದೇ ಗುರಿಯನ್ನು ಇಟ್ಟು ಇಂದು ಹೋರಾಟ ನಡೆಸುವುದು ಹೆಚ್ಚು ಸೂಕ್ತ. ಚುನಾವಣೆಗಳಲ್ಲಿ ಈ ಕೆಳಕಂಡ ಬದಲಾವಣೆಗಳಂತೂ ಕಡ್ಡಾಯವಾಗಿ ಆಗಲೇಬೇಕು. ಅದು ಆಗದೆ ದೇಶ ಅಭಿವೃದ್ಧಿ ಕಾಣಲು ಸಾಧ್ಯವೇ ಇಲ್ಲ.

೧) ಮುಖ್ಯವಾಗಿ ಚುನಾವಣೆಗಳು ವ್ಯಾಪಾರಿ ಜಾಹೀರಾತು ರೀತಿಯ ಪ್ರಚಾರಗಳನ್ನು ತೊರೆದು ಪ್ರತಿಯೊಬ್ಬ ಅಭ್ಯರ್ಥಿಯ ವೆಚ್ಚವನ್ನು ಚುನಾವಣಾ ಆಯೋಗವೇ ವಹಿಸಿಕೊಂಡು ಅತ್ಯಂತ ಸರಳ ಪ್ರಚಾರಗಳನ್ನು ಮಾಡಬೇಕು.

೨) ಮತದಾರರಿಗೆ ಭಾವಚಿತ್ರ ಸಹಿತ ಗುರುತು ಚೀಟಿ ನೀಡಿ ಕಳ್ಳ ಮತದಾನ ತಡೆಯಬೇಕು.

೩) ಪ್ರತಿಯೊಬ್ಬ ಪ್ರಜೆಯೂ ಮತದಾನ ಮಾಡುವಂತೆ ಕಡ್ಡಾಯಗೊಳಿಸಬೇಕು.

೪) ಯಾವುದೇ ಅಭ್ಯರ್ಥಿ ಮತ "ದಾನ"ಕ್ಕೆ ಅರ್ಹನಲ್ಲವೆಂದು ಕಂಡು ಬಂದರೆ ಮತದಾರನಿಗೆ ನಕಾರಾತ್ಮಕ ಮತ ಚಲಾಯಿಸಲು ಹಕ್ಕಿರಬೇಕು. ಅದಕ್ಕಾಗಿಯೇ ಬೇರೆ ಚಿಹ್ನೆ ಹಾಗೂ ಅಂಕಣವನ್ನು ಮತ ಪತ್ರದಲ್ಲಿ ನಮೂದಿಸಬೇಕು.

೫) ಪ್ರಧಾನಿಯನ್ನಾಗಲೀ ಸರ್ಕಾರವನ್ನಾಗಲೀ ಉರುಳಿಸುವ ಹಕ್ಕು ಸಂಸತ್ ಸದಸ್ಯರಿಗಿರುವಂತೆ ಒಬ್ಬ ಆಯ್ಕೆಗೊಂಡ ಜನಪ್ರತಿನಿಧಿಯನ್ನು ಉರುಳಿಸುವ (?) ಹಕ್ಕು ಆ ಕ್ಷೇತ್ರದ ಮತದಾರನಿಗಿರಬೇಕು.

೬ ಯಾವುದೇ ಪಕ್ಷ ಭರವಸೆ ಘೋಷಣೆಗಳನ್ನು ಹೊರಡಿಸಿ ಮತ ಕೇಳಿ, ಅಧಿಕಾರಕ್ಕೆ ಬಂದ ಮೇಲೆ ಅದನ್ನು ಮರೆತು ಬಿಟ್ಟರೆ ಭರವಸೆ ಈಡೇರಿಸದಿದ್ದರೆ ಆ ಪಕ್ಷ ಹಾಗೂ ಅದರಿಂದ ಆಯ್ಕೆಗೊಂಡ ವ್ಯಕ್ತಿಗಳ ವಿರುದ್ಧ ನ್ಯಾಯಾಲಯಕ್ಕೆ ಹೋಗಿ ಪರಿಹಾರ ಪಡೆಯುವ ಅವಕಾಶ ಮತದಾರನಿಗಿರಬೇಕು.

೭) ಯಾವುದೇ ರೀತಿಯ ಕ್ರಿಮಿನಲ್ ಆರೋಪಿ ಸಹ ಚುನಾವಣೆಗೆ ನಿಲ್ಲುವ ಅವಕಾಶ ಇರಬಾರದು.

೮) ಚುನಾವಣೆ ಎದುರಿಸುವ ಪ್ರತಿಯೊಂದು ಪಕ್ಷದಲ್ಲಿ ಪ್ರಜಾಪ್ರಭುತ್ವವನ್ನು ಕಡ್ಡಾಯವಾಗಿ ತರಬೇಕು. ಯಾವುದೇ ಪಕ್ಷ ಚುನಾವಣೆ ಎದುರಿಸಲು ಅದು ಹುಟ್ಟಿ ಕನಿಷ್ಠ ಮೂರು ವರ್ಷವಾದರೂ ಆಗಿರಬೇಕು. (ಆಗ ದಿಢೀರ್ ಪಕ್ಷಗಳ ಹಾವಳಿ ಕಮ್ಮಿಯಾಗಬಹುದು.)

೯) ಯಾವುದೇ ಪಕ್ಷ ತನ್ನ ಅಭ್ಯರ್ಥಿಯನ್ನು ಚುನಾವಣೆಗೆ ಇಳಿಸಬೇಕಾದರೆ ಆತ ಕನಿಷ್ಠ ೫ ವರ್ಷ ಆ ಪಕ್ಷದ ಸಕ್ರಿಯ ಸದಸ್ಯನಾಗಿರಬೇಕು ಹಾಗೂ ಪಕ್ಷದ ಸದಸ್ಯರಿಂದ ಆಯ್ಕೆಯಾಗಿರಬೇಕು. (ಆಗ ಸಿನಿಮಾ ನಟರ ಹಾವಳಿ ತಪ್ಪಿಸಬಹುದು) ಇತ್ಯಾದಿ, ಇತ್ಯಾದಿ....

ಈ ರೀತಿಯಾಗಿ ಚುನಾವಣಾ ವ್ಯವಸ್ಥೆ ಬದಲಾಗಿ ನ್ಯಾಯಾಂಗ ವ್ಯವಸ್ಥೆ ಬಿಗಿಯಾದರೆ, ಸುಳ್ಳು ಹೇಳಿ ಆಮಿಷ ಒಡ್ಡಿ ಅಧಿಕಾರ ಗಳಿಸುವ ಪ್ರತಿನಿಧಿಗಳಿಗೆ ವಿಫಲತೆಗಾಗಿ ಕಠಿಣ ಶಿಕ್ಷೆ ಅಥವಾ ಜನರಿಗೆ ಪರಿಹಾರ ನೀಡುವಂತಾದರೆ, ಕ್ರಮೇಣ ಐವತ್ತೋ ನೂರೋ ವರ್ಷಗಳಲ್ಲಿ ಸ್ವಲ್ಪವಾದರೂ ಈ ದೇಶ ಸುಧಾರಣೆಯಾದೀತು. ಆಯ್ಕೆಯಾದ ಸರ್ಕಾರವನ್ನು ನಿಯಂತ್ರಿಸುವ ಮೂಲಕ ಈ ದೇಶದ ನರನಾಡಿಗಳನ್ನು ನಿಯಂತ್ರಿಸುವ ಈ ದೇಶದ ನಿಜವಾದ ಆಳುವ ದೊರೆಗಳಾದ ಅಂಬಾನಿಗಳು, ನುಸ್ಲಿವಾಡಿಯಾಗಳು ಹಿಂದುಜಾ, ಟಾಟಾ, ಬಿರ್ಲಾಗಳು ಹಲ್ಲು ಕಿತ್ತ ಹಾವಾಗುತ್ತಾರೆ. ಆಗ ಏನಾದರೂ ಈ ದೇಶಕ್ಕೆ ಒಳಿತಾದೀತು. ಇಲ್ಲವಾದಲ್ಲಿ ಇದೇ ರೀತಿ ಮುಂದುವರಿದರೆ ಅಥವಾ ರಕ್ತ ಕ್ರಾಂತಿಯ ಮೂಲಕ ಯಾವುದೇ ವ್ಯವಸ್ಥೆ ಅಧಿಕಾರಕ್ಕೆ ಬಂದರೆ, ಮತ್ತೆ ಪುನಃ ಈ ದೇಶ ಶಿಲಾಯುಗಕ್ಕೆ ಹೋಗುತ್ತದೆ. "ಏನಾದರೂ ಬದಲಾವಣೆ ಆಗಬಹುದು" ಎಂಬ ನಿರೀಕ್ಷೆಯಲ್ಲೇ, ನನ್ನಂತಹವರು ಅವರ ಮಕ್ಕಳು ಮೊಮ್ಮಕ್ಕಳ ತಲೆ ತಲಾಂತರ ಕಳೆದುಹೋಗಬಹುದು.

ಪಂಜಾಬ್, ಅಸ್ಸಾಂ, ಕಾಶ್ಮೀರ, ತಮಿಳುನಾಡು ಮುಂತಾದಲ್ಲಿ ನಡೆಯುವ ಭಯೋತ್ಪಾದನೆಗೂ ನಮ್ಮ ರಾಜಕೀಯ ವ್ಯವಸ್ಥೆಗೂ ನಿಕಟವಾದ ನಂಟು ಇದೆ. ದುಡಿಯುವ ಕೈಗಳಿಗೆ ಕೆಲಸವಿಲ್ಲದಿದ್ದಾಗ ಆ ಕೈಗಳಿಗೆ ರಾಷ್ಟ್ರ ವಿರೋಧಿ ಶಕ್ತಿಗಳು ಕೆಲಸವನ್ನೊ ಹಣವನ್ನೊ ನೀಡುತ್ತವೆ. ಆಗ ಭಯೋತ್ಪಾದನೆಗೆ ಸಿದ್ಧಾಂತದ ಸ್ವರೂಪ ಬರುತ್ತದೆ.

ಚುನಾವಣೆಗಾಗಿ ಖರ್ಚು ಮಾಡುವ ಸಾವಿರಾರು ಕೋಟಿ ರೂ. ಹಣವನ್ನು ಉದ್ಯೋಗ ಸೃಷ್ಟಿಸಲು ಬಳಸಬಹುದು.

(೫ನೇ ಪುಟಕ್ಕೆ)

ಪ್ರಜಾಪ್ರಭುತ್ವದ ಮೊದಲ ಪಾಠ

(೩ನೇ ಪುಟದಿಂದ)

ರಾಜಕಾರಣಿಗಳ ಮೇಲೆ ಕಣ್ಣಿಡೋಣ. ಪತ್ರಗಳನ್ನು ಬರೆದು ಅವರ ಚಟುವಟಿಕೆಗಳನ್ನು ಗಮನಿಸುತ್ತಿರುವವರು ಇದ್ದಾರೆಂಬ ಎಚ್ಚರವನ್ನು ಮೂಡಿಸೋಣ. ನಮ್ಮ ನಾಯಕರನ್ನು ನಾವು ರೂಪಿಸೋಣ. ಅದು ಮೌನವಾಗಿ, ನಿಧಾನವಾಗಿ ನಡೆಯಬೇಕಾದ ಕ್ರಾಂತಿ. ಅದಕ್ಕೆ ಸಂಪನ್ಮೂಲ ಬೇಡ; ರಹಸ್ಯ ಕಾಪಾಡುವ ಆತಂಕ ಬೇಡ. 'ನಾನು ಮಾತ್ರ ಸುಭಗ; ಉಳಿದವರೆಲ್ಲ ಕೊಲ್ಲಿಸಿಕೊಳ್ಳಲು ಯೋಗ್ಯರು' ಎಂಬ ಅಹಂಕಾರದ ಮಾತು ಬೇಡ. ಸರ್ಕಾರದೊಂದಿಗೆ ಸಂಭಾಷಿಸುವ, ಚರ್ಚಿಸುವ ಪ್ರಜಾಪ್ರಭುತ್ವದ ಮೊದಲ ಪಾಠ ನಮ್ಮನ್ನು, ನಾವು ಬಯಸುವ ಬದಲಾವಣೆಯತ್ತ ಬಹು ದೂರ ಕೊಂಡೊಯ್ಯಬಲ್ಲುದು ಎಂಬುದೇ ನನ್ನ ದೃಢ ನಂಬಿಕೆ.

— ಹ. ಸುಂದರ ರಾವ್,
ಕೈಕಂಬ, ಬಿ. ಸಿ. ರೋಡ್, ದ.ಕ.

ರಾಮಕೃಷ್ಣಯ್ಯ ಸಸ್ಪೆಂಡ್‌ಗೆ ಬಿ. ಜೆ. ಪಿ. ಆಗ್ರಹ

ಕೊಪ್ಪ : ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಇನ್‌ಚಾರ್ಜ್ ಪ್ರಿನ್ಸಿಪಾಲ್ ಆಗಿದ್ದ ರಾಮಕೃಷ್ಣಯ್ಯ ಎಸಗಿರುವ ಅವ್ಯವಹಾರ ಮತ್ತು ಅನೈತಿಕ ವ್ಯವಹಾರಗಳನ್ನು ಕೊಪ್ಪ ತಾ|| ಬಿ.ಜೆ.ಪಿ ಕಾರ್ಯಕರ್ತರ ಸಭೆ ಖಂಡಿಸಿದೆ. ಅವರನ್ನು ಕೂಡಲೇ ಅಮಾನತಿನಲ್ಲಿಟ್ಟು, ವಿಚಾರಣೆ ನಡೆಸಿ ಶಿಕ್ಷಿಸಬೇಕೆಂದು ಸಭೆ ಸರ್ಕಾರವನ್ನು ಒತ್ತಾಯಿಸಿದೆ.

ಜೂ೯ ೩೦ ರಂದು ಜಿಲ್ಲಾಧ್ಯಕ್ಷ ಬಿ. ಎಸ್. ವಿಠಲರಾವ್ ಹಾಜರಿಯಲ್ಲಿ ನಡೆದ ಸಭೆ ಪ್ರಸಕ್ತ ಚುನಾವಣೆ ನಂತರದ ಸನ್ನಿವೇಶಗಳನ್ನು ಕುರಿತು ಚರ್ಚಿಸಿ, ಪಕ್ಷವನ್ನು ಬಲಪಡಿಸಲು ತೀರ್ಮಾನಿಸಿತು. ಪಕ್ಷದ ಯುವ ಮೋರ್ಚಾ ಸಂಚಾಲಕರಾಗಿ ಹಾಲಿಗೆ ಜ್ಞಾನೇಂದ್ರ ಆಯ್ಕೆಯಾದರು.

ಹರಿಹರಪುರದಲ್ಲಿ ಕುಮಾರವ್ಯಾಸಭಾರತ ವಾಚನ, ವ್ಯಾಖ್ಯಾನ

ಹರಿಹರಪುರ : ಇಲ್ಲಿನ ರಾಷ್ಟ್ರೋತ್ಥಾನ ಬಳಗದ ವತಿಯಿಂದ ಪ್ರತಿ ಶುಕ್ರವಾರ ಸಂಜೆ ೫ ೩೦ರಿಂದ ೭.೩೦ರವರೆಗೆ ಮಲ್ಲೇಶಯ್ಯನವರ ಛತ್ರದಲ್ಲಿ ಕುಮಾರವ್ಯಾಸ ಭಾರತದ ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ ಜೂ೯ ೨೧ರಿಂದ ನಡೆಯುತ್ತಿದೆ. ಆಸಕ್ತರು ಸದುಪಯೋಗ ಪಡೆಯಲು ಕೋರಲಾಗಿದೆ.

ಕೃಷಿ ಸಹಾಯಕನ ಮೇಲೆ ದಾದಾಗಿರಿ

ಹರಿಹರಪುರ : ಚಾವಲ್ಮನೆ ಮಂಡಲದ ಕೃಷಿ ಸಹಾಯಕರಾಗಿರುವ ಎ. ಎಸ್. ಕರಿಯಪ್ಪ ಅವರ ಮೇಲೆ ಚಾವಲ್ಮನೆ ಹೊಸ್ಕೇರಿಯ ಎಚ್. ಆರ್. ಮಂಜುನಾಥ ಎಂಬವ ಜೂನ್ ೨೯ ರಂದು ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿರುವುದಾಗಿ ಇಲ್ಲಿನ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬಿತ್ತನೆ ಬೀಜ, ರಸಗೊಬ್ಬರ ಮುಂತಾದುವನ್ನು ತನಗೆ ಪುಕ್ಕಟೆ ಕೊಡಿಸುವಂತೆ ಆತ ಬಹಳ ದಿನಗಳಿಂದ ಪೀಡಿಸುತ್ತಿದ್ದನೆಂದೂ, ಆದರೆ ಮಂಡಲದ ನಿರ್ಣಯದಂತೆ ಹಾಗೂ ಜಿಲ್ಲಾ ಕೃಷಿ ಅಧಿಕಾರಿಗಳ ಆದೇಶದಂತೆ ಆತ ಫಲಾನುಭವಿಯಾಗಿ ಆಯ್ಕೆಯಾಗದಿದ್ದುದರಿಂದ ಸೌಲಭ್ಯಗಳನ್ನು ಕೊಡಲಾಗಲಿಲ್ಲವೆಂದೂ, ಇದರಿಂದ ಕೆರಳಿದ ಆತ ತನಗೆ ಪುಕ್ಕಟೆ ಸಾಮಗ್ರಿಗಳನ್ನು ಕೊಡಿಸದಿದ್ದಲ್ಲಿ ೩ ದಿನದೊಳಗೆ ಕೊಲೆ ಮಾಡುವುದಾಗಿ 'ಭೂಮಿ ಸಾಕ್ಷಿ'ಯಾಗಿ 'ಶಪಥ' ಮಾಡುತ್ತ ಹಲ್ಲೆಎಸಗಿದನೆಂದೂ ಕರಿಯಪ್ಪ ದೂರಿದ್ದಾರೆ.

ರೈತರಿಗೆ ತರಬೇತಿ, ವೈಜ್ಞಾನಿಕ ಕೃಷಿ, ಜೈವಿಕ ಅನಿಲ ಕಾರ್ಯಕ್ರಮ ಮುಂತಾಗಿ ಇಲಾಖೆಯ ಎಲ್ಲ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರಗತಿ ಸಾಧಿಸಿರುವ ಕರಿಯಪ್ಪ ಈ ಹಲ್ಲೆಯಿಂದ ತುಂಬ ನೊಂದಿದ್ದಾರೆ.

ಠಾಣಾಧಿಕಾರಿ ರೇವಣ್ಣಾಚಾರ್ ಅವರು ದೂರು ದಾಖಲಿಸಿಕೊಂಡಿದ್ದು, ಅಪರಾಧಿಗೆ ತಕ್ಕ ಶಿಕ್ಷೆ ನೀಡುವ ಭರವಸೆ ಇತ್ತಿದ್ದಾರೆಂದು ತಿಳಿದು ಬಂದಿದೆ. ಆದರೆ ಹಾಗೆ ಮಾಡುವುದಕ್ಕೆ ರಾಜಕಾರಣಿಗಳ ಶ್ರೀರಕ್ಷೆ ಅವಕಾಶ ಕೊಡುವುದು ಸಂಶಯಾಸ್ಪದವಾಗಿ ಕಾಣುತ್ತಿದೆ.

ಹಿಗ್ಗೆ ಕೇವಲ ತಮ್ಮ ಮೂಗಿನ ನೇರಕ್ಕೆ ನಡೆದುಕೊಳ್ಳದ ಸಿಬ್ಬಂದಿಯ ವಿರುದ್ಧ ಸಿಕ್ಕ ಸಿಕ್ಕವರೆಲ್ಲ ಹಲ್ಲೆ ಎಸಗುವ ಮಟ್ಟಕ್ಕಿಳಿದರೆ ನೌಕರರು ಕೆಲಸ ನಿರ್ವಹಿಸುವುದೇ ಅಸಾಧ್ಯವಾಗುತ್ತದೆಂದಿರುವ ತಾಲ್ಲೂಕಿನ ಇತರ ಕೃಷಿ ಸಹಾಯಕರು ಮತ್ತು ಸರ್ಕಾರಿ ನೌಕರರ ಸಂಘದ ಪ್ರತಿನಿಧಿಗಳು, ಅಪರಾಧಿಗೆ ಯಾವುದೇ ರಾಜಕೀಯ ಮುಲಾಜು ನೋಡದೆ ತೀಕ್ಷ್ಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದ್ದಾರೆ.

(ವರದಿ : ಜೆ. ಎಸ್. ಶ್ರೀನಿಧಿ)

ನವೋದಯ ಶಾಲೆಗೆ 'ನೂರಕ್ಕೆ ನೂರು'

ಬಾಳೆಹೊನ್ನೂರು : ಸಮೀಪದ ನವೋದಯ ಶಾಲೆಯು ಹತ್ತನೇ ತರಗತಿಯ 'ಸಿ. ಬಿ.ಎಸ್.ಸಿ' ಪರೀಕ್ಷೆಯಲ್ಲಿ ನೂರಕ್ಕೆ ನೂರು ತೇರ್ಗಡೆಯ ಫಲಿತಾಂಶ ಗಳಿಸಿದೆ. ಎಲ್ಲಾ ೬೩ ವಿದ್ಯಾರ್ಥಿಗಳೂ ಪಾಸಾಗಿದ್ದು, ೨೪ ಮಂದಿ ಮೊದಲ ದರ್ಜೆ ಗಳಿಸಿದ್ದಾರೆ.

ರೋಟರಿ ಪದಾಧಿಕಾರಿಗಳು

ಕೊಪ್ಪ : ೧೯೯೧-೯೨ ನೇ ಸಾಲಿಗೆ ಇಲ್ಲಿನ ರೋಟರಿ ಕ್ಲಬ್ ಅಧ್ಯಕ್ಷರಾಗಿ ಎಂ. ಎಚ್. ಅಬು ಮಹಮದ್, ಉಪಾಧ್ಯಕ್ಷರಾಗಿ ಪಾಸ್ಕಲ್ ಡಯಾಸ್, ಕಾರ್ಯದರ್ಶಿಯಾಗಿ ಹರೀಶ್ ಭಂಡಾರಿ, ಮತ್ತು ಖಜಾಂಚಿಯಾಗಿ ಎಸ್. ರವೀಂದ್ರ ಪೈ ಆಯ್ಕೆಯಾಗಿದ್ದಾರೆ.

ಪ್ರಾಥಮಿಕಶಾಲೆ, ಅಂಗನವಾಡಿ ಉದ್ಘಾಟನೆ

ಶೃಂಗೇರಿ : ಇಲ್ಲಿಗೆ ಸಮೀಪದ ಕಿಕ್ಲಿ ಬೈಲಿನಲ್ಲಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಅಂಗನವಾಡಿಯ ಉದ್ಘಾಟನೆ ವಿದ್ಯಾರಣ್ಯಪುರ ಮಂಡಲ ಪ್ರಧಾನ ಎಚ್. ಜಿ. ಶಿವಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಈಚೆಗೆ ನಡೆಯಿತು. ಶಾಲೆಯ ಕಟ್ಟಡ ಮತ್ತು ಅಂಗನವಾಡಿ ಕೇಂದ್ರವನ್ನು ಕೆ. ವಿ. ರಾಮಪ್ಪಯ್ಯ ಉದ್ಘಾಟಿಸಿದರು. ಕೆ ಶಂಕರಪ್ಪ, ವಿ ಎ. ಪಾಟೀಲ್, ದೊಡ್ಡ ಸಿದ್ಧಯ್ಯ ಅತಿಥಿಗಳಾಗಿದ್ದರು. ಕಟ್ಟಡದ ಗುತ್ತಿಗೆದಾರರಾದ ಸಿ.ಎ ಅಬ್ಬಾಸ್ ರನ್ನು ಶೈಕ್ಷಣಿಕ ಸಮಿತಿ ಅಧ್ಯಕ್ಷ ಎಚ್. ಸಿ. ಮಲ್ಲಪ್ಪಗೌಡ ಸನ್ಮಾನಿಸಿದರು. ಎಚ್. ಟಿ. ರಮೇಶ್ ಸ್ವಾಗತಿಸಿ, ಕೆ. ಜಿ. ನಾಗಪ್ಪ ವಂದಿಸಿದರು. (ವರದಿ : ನಾಗಪ್ಪ)

ಸಿರಿಮನೆಯಲ್ಲಿ ಅಂಗನವಾಡಿ ಆರಂಭ

ಸಮಗ್ರ ಬಾಲವಿಕಾಸ ಯೋಜನೆಯಡಿ ಶೃಂಗೇರಿ ತಾಲ್ಲೂಕಿನ ಸಿರಿಮನೆಯಲ್ಲಿ ಜು. ೧ರಂದು ಅಂಗನವಾಡಿ ಕೇಂದ್ರವೊಂದು ಪ್ರಾರಂಭವಾಯಿತು. ಕೇಂದ್ರವನ್ನು ಸಿರಿಮನೆ ಲಕ್ಷ್ಮೀನಾರಾಯಣ ಉದ್ಘಾಟಿಸಿ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸಿರಿಮನೆ ಅಚ್ಚುತರಾವ್ ಅವರು ಅಂಗನವಾಡಿ ಕೇಂದ್ರದ ಸದುದ್ದೇಶಗಳನ್ನು ಕುರಿತು ಮಾತನಾಡಿ, ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಗ್ರಾಮಸ್ಥರು ಅಂಗನವಾಡಿ ಕೇಂದ್ರ ಉತ್ತಮವಾಗಿ ನಡೆಯಲೆಂದು ಹಾರೈಸಿದರು.

(ವರದಿ : ಸಿರಿಮನೆ ಭಾಸ್ಕರರಾವ್)

ಚುನಾವಣೆ, ನ್ಯಾಯಾಂಗ ವ್ಯವಸ್ಥೆ ಸುಧಾರಣೆ

(೧ನೇ ಪುಟದಿಂದ)

ಸರ್ಕಾರವನ್ನು ನಿಯಂತ್ರಿಸುತ್ತಿರುವ ಭಾರೀ ಬಂಡವಾಳ ಶಾಹಿಗಳನ್ನು ನಿಯಂತ್ರಿಸುವ ಮೂಲಕವೂ ಉದ್ಯೋಗ ಸೃಷ್ಟಿಸಬಹುದಲ್ಲದೆ ಬೆಲೆ ಏರಿಕೆಯನ್ನು ಸಮರ್ಥವಾಗಿ ನಿಯಂತ್ರಿಸಬಹುದು ಇದೆಲ್ಲಾ ಆಗಬೇಕಾದರೆ ನಮಗೆ ನ್ಯಾಯಯುತ ಸರಳ ಚುನಾವಣಾ ವ್ಯವಸ್ಥೆ ಹಾಗೂ ಬಿಗಿ ನ್ಯಾಯಾಂಗ ವ್ಯವಸ್ಥೆ ಬೇಕು.

ಇದೆಲ್ಲಾ ಸರಿ ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ಬೆಕ್ಕು ಈಗಂತೂ ಬಲಿಷ್ಠವಾಗಿದೆ ಬ್ರಿಟಿಷರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ಗಳಿಸಲು ನಮಗೆ ೧೦೦ ವರ್ಷಗಳೇ ಬೇಕಾಯ್ತು. ಆದರೆ ನಮ್ಮೊಳಗಿನ ಈ "ಬ್ರಿಟಿಷರ" ವಿರುದ್ಧ ಹೋರಾಡಲು ೫೦೦ ವರ್ಷಗಳೂ ಸಾಲದೇನೋ? ಆದರೂ ನಿರಂತರ ಜನ ಜಾಗೃತಿ ಮತ್ತು ಹೋರಾಟ ಮಾತ್ರವೇ ಇದಕ್ಕೆ ಪರಿಹಾರ ಅನ್ನಿಸುತ್ತದೆ.

ಕೊಪ್ಪ-ಮೈಸೂರು ಸರ್ಕಾರಿ ಬಸ್ ನಿಲ್ಲಿಸಲು ಪಟ್ಟಭದ್ರರ ಹುನ್ನಾರ ?

ಕೊಪ್ಪ : ಇಲ್ಲಿಂದ ಮೈಸೂರಿಗೆ ಓಡಿಸಲಾಗುತ್ತಿರುವ ಸರ್ಕಾರಿ ಬಸ್ಸಿನಲ್ಲಿ ಕೇವಲ ಚಿಕ್ಕಮಗಳೂರಿನವರೆಗೆ ಮಾತ್ರ ಟಿಕೆಟ್ ನೀಡಿ, ಅಲ್ಲಿಂದ ಪ್ರತ್ಯೇಕ ಟಿಕೆಟ್ ತೆಗೆದುಕೊಳ್ಳುವಂತೆ ಒತ್ತಾಯಿಸುತ್ತಿದ್ದಾರೆಂದೂ, ಹಾಸನ, ಮೈಸೂರು ಮುಂತಾದ ಕಡೆಗಳಿಗೆ ನೇರವಾಗಿ ಟಿಕೆಟ್ ಕೊಡುತ್ತಿಲ್ಲವೆಂದೂ ಸಾರ್ವಜನಿಕರು ದೂರಿದ್ದಾರೆ. ಮೈಸೂರಿನಿಂದ ಇಲ್ಲಿಗೆ ಬರುವ ಟ್ರಿಪ್‌ನಲ್ಲೂ ಹಾಗೇ ಮಾಡುತ್ತಿದ್ದಾರೆ ಎಂದೂ ತಿಳಿಸಿದ್ದಾರೆ.

ಇದಲ್ಲದೆ, ಬಸ್ಸು ಕೆಲವು ಸಲ ಅನಿಯಮಿತವಾಗಿ ಬಂದು ಹೋಗುವುದು, ಕೆಲವು ಸಲ ಚಿಕ್ಕಮಗಳೂರಿನವರೆಗೆ ಮಾತ್ರ ಬಂದು "ಪ್ರಯಾಣಿಕರಿಲ್ಲ" ಎಂದು ಅಲ್ಲಿಂದಲೇ ವಾಪಸು ಹೋಗುವುದು ಕೂಡ ನಡೆಯುತ್ತಿದ್ದು, ಇದೆಲ್ಲವೂ ಕೊಪ್ಪ–ಮೈಸೂರು ಮಧ್ಯೆ ನೇರ ಪ್ರಯಾಣಿಕರ ದಟ್ಟಣೆ ಇಲ್ಲ, 'ಕಲೆಕ್ಷನ್' ಇಲ್ಲ ಎಂದು ಹೇಳಿ ಬಸ್ ನಿಲ್ಲಿಸುವ ಹುನ್ನಾರ ಹಾಗೂ ಖಾಸಗಿ ಬಸ್ ಕಂಪೆನಿಗಳೊಂದಿಗೆ ಸರ್ಕಾರಿ ಸಿಬ್ಬಂದಿ ಶಾಮೀಲಾಗಿ ನಡೆಸುತ್ತಿರುವ ಉದ್ದೇಶಪೂರಿತ ತಂತ್ರ ಎಂಬುದಾಗಿಯೂ ಸಾರ್ವಜನಿಕರು ಶಂಕಿಸಿದ್ದಾರೆ.

ಸೇನೆಗೆ ಸೇರ್ಪಡೆ : ಜಿಲ್ಲಾಧಿಕಾರಿ ಮನವಿ

ಚಿಕ್ಕಮಗಳೂರು : ಭಾರತ ಸೇನಾ ಪಡೆಗೆ ಇತ್ತೀಚಿನ ವರ್ಷಗಳಲ್ಲಿ ಸೇರ್ಪಡೆಯ ಪ್ರಮಾಣ ಬಹಳಷ್ಟು ಕಡಿಮೆ ಆಗಿರುವುದು ಕಂಡು ಬಂದಿದೆ. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಜಿಲ್ಲೆಯ ಯುವಕರು ಸೈನ್ಯಕ್ಕೆ ಸೇರಿ, ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಿಕೊಳ್ಳುವಂತೆ ಮಂಗಳೂರು ಸೇನಾ ಭರ್ತಿ ಅಧಿಕಾರಿಗಳ ಪತ್ರವನ್ನುಲ್ಲೇಖಿಸಿ, ಜಿಲ್ಲಾಧಿಕಾರಿಗಳು ಮನವಿ ಮಾಡಿದ್ದಾರೆ.

ಅಂಗವಿಕಲ ವಿದ್ಯಾರ್ಥಿಗಳ ಗಮನಕ್ಕೆ

ಶೃಂಗೇರಿ : ಈ ತಾಲ್ಲೂಕಿನ ವಿವಿಧ ಶಾಲೆಗಳಲ್ಲಿ, ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸ್ಕಾಲರ್‌ಶಿಪ್ ಮುಂತಾದ ಸೌಲಭ್ಯಗಳು ಬಾರದಿದ್ದಲ್ಲಿ, ಅಂಗವಿಕಲರ ಮಹಾ ಸಂಘದ ತಾಲ್ಲೂಕು ಪ್ರತಿನಿಧಿಯಾಗಿರುವ ಟಿ. ಎಂ. ಬಾಲಗಣಪತಿ, ಹರಿಹರ ಬೀದಿ, ಶೃಂಗೇರಿ ಇವರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಬಗರ್‌ಹುಕುಂ ಸಕ್ರಮ ಮತ್ತು ವ್ಯ.ಮಾ.ಸ. ಕಮಿಶರ್ನ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ತಲವಾನೆ ಪ್ರಕಾಶ್ ಮನವಿ

ಕೊಪ್ಪ : ಚಿಕ್ಕಮಗಳೂರು ಜಿಲ್ಲೆಯ ಬಹುತೇಕ ಸಣ್ಣ ಹಾಗೂ ದೊಡ್ಡ ರೈತರುಗಳು ಸರ್ಕಾರಿ ಜಮೀನಿನಲ್ಲಿ ಕಾಫಿ, ಅಡಿಕೆ, ಭತ್ತ, ಏಲಕ್ಕಿ ಹಾಗೂ ಖುಷ್ಕಿ ಬೆಳೆಗಳ ಸಾಗುವಳಿ ಮಾಡಿದ್ದು, ಕೆಲವೇ ರೈತರು ಇದನ್ನು ಬಹಿರಂಗಪಡಿಸಿ ಅಳತೆ ಮಾಡಿಸಿ ಟಿ.ಟಿ. ದಂಡ ಕಟ್ಟುತ್ತಿದ್ದಾರೆ. ಉಳಿದ ರೈತರು ಬಹಿರಂಗ ಪಡಿಸಿದಲ್ಲಿ ತೊಂದರೆಗೆ ಸಿಕ್ಕಿಕೊಳ್ಳಬಹುದೆಂದು ಬಹಿರಂಗ ಪಡಿಸಿಲ್ಲ ಇದನ್ನು ಸಕ್ರಮಗೊಳಿಸುವಲ್ಲಿ ವಿಳಂಬ ಮಾಡಿದಷ್ಟೂ ಸರ್ಕಾರಕ್ಕೆ ಕಂದಾಯ ನಷ್ಟವಾಗುವುದರಿಂದ ಆದಷ್ಟು ಜಾಗ್ರತೆ ಎಲ್ಲಾ ಹಳೆಯ ಬಗರ್‌ಹುಕುಂ ಸಾಗುವಳಿಯನ್ನೂ ಸಕ್ರಮಗೊಳಿಸುವ ಬಗ್ಗೆ ಸೂಕ್ತ ಆದೇಶ ಹೊರಡಿಸಬೇಕು ಹಾಗೂ ಮುಂದೆ ಯಾರೂ ಬಗರ್‌ಹುಕುಂ ಸಾಗುವಳಿ ಮಾಡದಿರುವಂತೆಯೂ ಕಠಿಣ ಕಾನೂನು ಜಾರಿಗೊಳಿಸಬೇಕು ಎಂದು ಕೊಪ್ಪ ತಾ॥ ಸಮಾಜವಾದಿ ಜನತಾ ಪಕ್ಷದ ಅಧ್ಯಕ್ಷ ತಲವಾನೆ ಪ್ರಕಾಶ್ ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿದ್ದಾರೆ

ಇದಲ್ಲದೆ ಟಿ ಟಿ. ದಂಡ ವಿಧಿಸುವಾಗ ತಾಲ್ಲೂಕು ದಂಡಾಧಿಕಾರಿಯವರಿಗೆ ಎಕರೆಗೆ ರೂ. ೫೦೦೦ರವರೆಗೆ ಟಿ ಟಿ. ದಂಡ ವಿಧಿಸುವ ಪರಿಮಿತಿ ಇರುವುದರಿಂದ ಕೆಲವು ತಾಲ್ಲೂಕುಗಳಲ್ಲಿ ರೈತರನ್ನು ಇಕ್ಕಟ್ಟಿಗೆ ಸಿಲುಕಿಸಿ ಕಂದಾಯ ಅಧಿಕಾರಿಗಳು ಹಣ ಮಾಡುತ್ತಿರುವ ಬಗ್ಗೆ ವದಂತಿಗಳು ಹಬ್ಬಿವೆ. ದೊಡ್ಡ ರೈತರುಗಳು ಹೆಚ್ಚಿನ ಟಿ ಟಿ ದಂಡ ವಿಧಿಸಿದರೆ ನ್ಯಾಯಾಲಯಗಳಿಗೆ ಹೋಗಿ ತಡೆಯಾಜ್ಞೆ ತರುತ್ತಾರೆ. ಆದರೆ ಸಣ್ಣ ರೈತರು ಅಧಿಕಾರಿಗಳಿಗೆ ಹಣ ನೀಡಲೂ ಆಗದೆ, ನ್ಯಾಯಾಲಯದ ಮೊರೆ ಹೋಗಲೂ ಆಗದೇ ಸಂಕಷ್ಟಕ್ಕೆ ಒಳಗಾಗುತ್ತಾರೆ. ಆದ್ದರಿಂದ ಎಲ್ಲಾ ರೀತಿಯ ಬಗರ್‌ಹುಕುಂ ಸಾಗುವಳಿಗೂ ಕಂದಾಯದ ಎರಡು ಪಟ್ಟು ಮೊತ್ತವನ್ನು ವಿಧಿಸುವಂತೆ ಆದೇಶ ಹೊರಡಿಸಬೇಕೆಂದೂ ಅವರು ವಿನಂತಿಸಿದ್ದಾರೆ.

ವ್ಯ.ಮಾ ಸ ಕಮಿಶನ್ ಸಮಸ್ಯೆ

ಮಲೆನಾಡಿನ ಅಡಿಕೆ ಬೆಳೆಗಾರರು ಶಿವಮೊಗ್ಗ ಅಥವಾ ಸಾಗರ ಮಾರುಕಟ್ಟೆಗೆ ಅಡಿಕೆ ಕಳಿಸಿ. ಮಂಡಿಗಳವರಿಂದ ಅಡಿಕೆ ವ್ಯಾಪಾರಕ್ಕೆ ನೊಥಲೀ ಮೂಟೆಗಳ ಮೇಲೆ ಹಾಗೂ ಬೆಳೆ ಸಾಲದ ರೀತಿ ನಂಬಿಕೆಯ ಮೇಲೆ ಸುಲಭವಾಗಿ ಸಾಲಗಳನ್ನು ಪಡೆದು, ಮದುವೆ-ಮುಂಜಿ, ಜಮೀನು ಅಭಿವೃದ್ಧಿ, ಮನೆ ಕಟ್ಟುವುದು ಮುಂತಾಗಿ ಅವಶ್ಯಕತೆಗಳನ್ನು ನಿಭಾಯಿಸಿಕೊಳ್ಳುತ್ತಿದ್ದು, ಇತ್ತೀಚೆಗೆ ಕಮಿಷನ್ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡ ನಿರ್ಧಾರದಿಂದಾಗಿ ಈಗ ಮಂಡಿಗಳಲ್ಲಿ ಸಾಲಗಳೇ ಸಿಗದೆ ಬೆಳೆಗಾರರು ಚಿಂತೀಗೀಡಾಗಿದ್ದಾರೆ ಆದ್ದರಿಂದ ಸರ್ಕಾರ ಕೂಡಲೇ ಸೂಕ್ತ ನಿರ್ಧಾರ ತೆಗೆದುಕೊಂಡು, ರೈತರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಕಾಶ್ ಕೃಷಿ ಮಂತ್ರಿ ಕೆ. ಎಚ್. ಪಾಟೀಲರಿಗೂ ಮನವಿ ಕಳಿಸಿದ್ದಾರೆ.

ರಾಷ್ಟ್ರಪ್ರಶಸ್ತಿ ವಿಜೇತ ಸಾಹಿತಿಗಳ ನೂರರ ಹಬ್ಬ : ತಾ॥ ಕ.ಸಾ.ಪ. ನಿರ್ಧಾರ

ಹಂಹರಪುರ : ರಾಷ್ಟ್ರಪ್ರಶಸ್ತಿ ವಿಜೇತ ಸಾಹಿತಿಗಳ ಶತಮಾನೋತ್ಸವವನ್ನು ಆಚರಿಸಲು ಈಚೆಗೆ ಇಲ್ಲಿ ಸಭೆ ಸೇರಿದ್ದ ತಾ॥ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ತೀರ್ಮಾನಿಸಿ, ಕಾರ್ಯಕ್ರಮ ರೂಪಿಸಿದೆ. ಸಭೆಯ ಅಧ್ಯಕ್ಷತೆಯನ್ನು ತಾ॥ ಕ. ಸಾ ಪ ಅಧ್ಯಕ್ಷ ಕೆ. ಜಿ ಎನ್. ಶಾಸ್ತ್ರಿ ವಹಿಸಿದ್ದರು.

ಅನಿಲ್‌ಗೆ ಸನ್ಮಾನ

ಇದೇ ಸಂದರ್ಭದಲ್ಲಿ ಪಿ. ಯು ಸಿ. ರ್‍ಯಾಂಕ್ ವಿಜೇತ ಅನಿಲ್ ಕುಮಾರ್‌ನನ್ನು ಕ.ಸಾ ಪ. ವತಿಯಿಂದ ರಾಘವಾಚಾರ್‌ರವರ ಅಧ್ಯಕ್ಷತೆಯಲ್ಲಿ ಸನ್ಮಾನಿಸಲಾಯಿತು ಡಾ॥ ಕೋದಂಡರಾಂ ಅನಿಲನನ್ನು ಅಭಿನಂದಿಸಿ ಮಾತನಾಡಿದರು.

ಅನಿಲನ ತಾಯಿ ಶ್ರೀಮತಿ ವಿವ.ಲಾ ಎ೯. ಶಾಸ್ತ್ರಿ ಅವರ ಮಾತನಾಡಿ, ಮಗನ ಅಭ್ಯುದಯದಲ್ಲಿ ತಾಯಿಯ ಪಾತ್ರ ಕುರಿತು ಸಂಕ್ಷಿಪ್ತವಾಗಿ ವಿವರಿಸಿದರು. ಕೆ ಸಿ. ವೆಂಕಟೇಶ ಸ್ವಾಗತಿಸಿ, ಎ ಎನ್ ಸೀರಿಗಾರ್ ವಂದಿಸಿದರು.

(ವರದಿ: ಬಿ. ವಿ ಆರ್. ಪ್ರಸಾದ್)

ರಿನ್ಯೂಎಬಲ್ ಎನರ್ಜಿ ಸಂಸ್ಥೆಯ ಕಾರ್ಯಕ್ರಮ ಶೃಂಗೇರಿಯಲ್ಲಿ ಜು. ೨೯ರಂದು

ಕೊಪ್ಪ : ಹಿಲ್ ಏರಿಯ ರಿನ್ಯೂಎಬಲ್ ಎನರ್ಜಿ ಸಿಸ್ಟಮ್ಸ್‌ನವರ ಪ್ರಾತ್ಯಕ್ಷಿಕೆ ಮತ್ತು ತಯಾರಕರ ನೋಂದಾವಣೆ ಕಾರ್ಯಕ್ರಮ ಶೃಂಗೇರಿಯಲ್ಲಿ ಜು ೨೯ ರಂದು ಹಾಗೂ ಬಿಳಾಲುಕೊಪ್ಪದ ಕೃಷಿ ವಿಜ್ಞಾನ ವಿನಿಮಯ ಕೇಂದ್ರದ ವತಿಯಿಂದ ಪ್ರಾತ್ಯಕ್ಷಿಕೆ ಕಾರ್ಯಕ್ರಮ ಜು. ೨೮ರಂದು ನಡೆಯಲಿವೆ. ಹೆಚ್ಚಿನ ವಿವರಗಳನ್ನು ಮುಂದೆ ಪ್ರಕಟಿಸಲಾಗುವುದೆಂದು ಸದರಿ ಇಲಾಖೆಯ ಡಿಸೈನ್ ಇಂಜಿನಿಯರ್ ಪರಮೇಶ್ವರ ತಿಳಿಸಿದ್ದಾರೆ.

ಸಮಗ್ರ ಅಕ್ಕಿ ಅಭಿವೃದ್ಧಿ ಯೋಜನೆ ಶಿಬಿರ

ಕೊಪ್ಪ : ಕೇಂದ್ರ ಸರ್ಕಾರದ ಸಮಗ್ರ ಅಕ್ಕಿ ಅಭಿವೃದ್ಧಿ ಯೋಜನೆಯ ತಾ॥ ಮಟ್ಟದ ತರಬೇತಿ ಕಾರ್ಯಕ್ರಮವೊಂದು ಈಚೆಗೆ ಇಲ್ಲಿನ ಸ॥ ಕೃಷಿ ನಿರ್ದೇಶಕರ ಕಛೇರಿಯಲ್ಲಿ ನಡೆಯಿತು

ಸುಮಿತ್ರಮ್ಮ, ಬಿ ಜಿ. ಚಿದಂಬರ್, ಸ. ಕೃ. ನಿ. ಶ್ರೀನಿವಾಸಯ್ಯ, ಪ್ರಗತಿಪರ ರೈತ ಶ್ರೀನಿವಾಸ ನಾಯ್ಕ್ ಮಾತನಾಡಿದರು. ಕೃಷಿ ತಜ್ಞರುಗಳಾದ ಬೆಳವಾಡಿ, ರಾಜಪ್ಪ ಮತ್ತು ಮೂಡಿಗೆರೆ ಪ್ರಾ. ಸಂಕೇಂದ್ರದ ಸೈಯದ್ ಅನ್ವರುಲ್ಲಾ ಅವರುಗಳು ರೈತರಿಗೆ ಕೃಷಿ ಸಲಹೆಗಳನ್ನು ನೀಡಿದರು

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರೈತರಿಗೆ ಕೊನೆಯಲ್ಲಿ ಲಘು ಉಪಾಹಾರದ ಜೊತೆ ೧೦ ರೂ ಗಳನ್ನೂ (ದಕ್ಷಿಣೆ!?) ನೀಡಿದ್ದು, ಕಾರ್ಯಕ್ರಮದ ವಿಶೇಷತೆಯಾಗಿತ್ತು. (ವರದಿ : ಜೆ. ಎನ್. ಶ್ರೀನಿಧಿ)

ನ. ರಾ. ಪುರ

ಇಲ್ಲಿನ ಕೃಷಿ ಇಲಾಖೆ ಮತ್ತು ಜ್ವಾಲಾಮಾಲಿನಿ ಜೇಸಿ ಸಂಯುಕ್ತ ಆಶ್ರಯದಲ್ಲಿ ಇಂಥದೇ ಶಿಬಿರ ಜೂನ್ ೨೧ರಂದು ಬಿ. ವಿ. ಪುಟ್ಟಸ್ವಾಮಿ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ನವಿಲೂರು ಪ್ರಕಾಶ್ ಮತ್ತು ತಹಸೀಲ್ದಾರ್ ಪ್ರಭಾಕರ ಶರ್ಮ ಮುಖ್ಯ ಅತಿಥಿಗಳಾಗಿದ್ದರು. ಭಾಗವಹಿಸಿದ್ದ ಸುಮಾರು ೧೨೦ ಜನ ರೈತರಿಗೆ ಮೂಡಿಗೆರೆ ಕೃಷಿ ಸಂಶೋಧನಾ ಕೇಂದ್ರ ಮತ್ತು ಕೃಷಿ ಇಲಾಖೆಯ ತಜ್ಞರು ತರಬೇತಿ, ಮಾರ್ಗದರ್ಶನ ನೀಡಿದರು. ಚಿಕ್ಕಗಂಗಯ್ಯ ಸ್ವಾಗತಿಸಿ, ಎಚ್.ವಿ. ವಿಶ್ವನಾಥ್ ವಂದಿಸಿದರು.

ಶೃಂಗೇರಿ

ತಾಲ್ಲೂಕಿನ ರೈತರಿಗೆ ಸಮಗ್ರ ಅಕ್ಕಿ ಅಭಿವೃದ್ಧಿ ಯೋಜನೆಯ ತರಬೇತಿ ಶಿಬಿರ ಜಿ. ಪ. ಸದಸ್ಯ ಕೆ. ವಿ. ರಾಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಂಡಲ ಪ್ರಧಾನ ಎಚ್. ಆರ್. ಕೃಷ್ಣಮೂರ್ತಿ ಮುಖ್ಯ ಅತಿಥಿಯಾಗಿದ್ದರು. ಬಿ. ನಾ. ರಾಜಶೇಖರ್ ಸ್ವಾಗತಿಸಿದರು. ಕೃಷಿ ತಜ್ಞರು ತರಬೇತಿ ನೀಡಿ ರೈತರೊಂದಿಗೆ ಚರ್ಚಿಸಿದರು. ಶಿವಸ್ವಾಮಿ ವಂದಿಸಿದರು.

ಕೊಪ್ಪ ರೇಂಜರ್‌ರದೆನ್ನಲಾದ ದಾಖಲೆ ರಹಿತ ಬೀಟೆ ನಾಟ ಫಾರೆಸ್ಟರ್‌ರಿಂದ ಜಪ್ತಿ!

ಕೊಪ್ಪ : ಇಲ್ಲಿನ ವಲಯ ಅರಣ್ಯಾಧಿಕಾರಿ ನರಸಿಂಹಯ್ಯ ಅವರು ಸೋಫಾಸೆಟ್ ಮಾಡಿಸಲೆಂದು ತಂದು ಹಾಕಿದ್ದೆನ್ನಲಾದ ದಾಖಲೆರಹಿತ ಬೀಟೆ ನಾಟವನ್ನು ಫಾರೆಸ್ಟರ್ ಚನ್ನಪ್ಪ ಮೇಲಿನ ಪೇಟೆಯ ಜನಾರ್ದನಾಚಾರ್ಯರ ಕಾರ್ಯಾಗಾರದಿಂದ ಜು. ೪ ರಂದು ಮುಟ್ಟುಗೋಲು ಹಾಕಿಕೊಂಡಿರುವ ವಿಶಿಷ್ಟ ಪ್ರಕರಣ ನಡೆದಿದೆ.

ಸುಮಾರು ಮೂರೂವರೆ ಅಡಿ ಉದ್ದದ ೫ ತುಂಡುಗಳಿದ್ದು ೪-೫ ಘನ ಅಡಿ ನಾಟಾ ಇತ್ತೆಂದು ಅಂದಾಜು ಇದಕ್ಕೆ ಮುಂಚಿನ ದಿನ, ಪ್ಲಾಂಟೇಶನ್ ಬೇಲಿ ವಿಷಯದಲ್ಲಿ ನರಸಿಂಹಯ್ಯ ಫಾರೆಸ್ಟರ ಕತ್ತಿನಪಟ್ಟಿ ಹಿಡಿದು ಸಾರ್ವಜನಿಕವಾಗಿ ಅವಮಾನಪಡಿಸಿದ್ದರೆಂದೂ, ಇದಕ್ಕೆ ಪ್ರತೀಕಾರವಾಗಿ, ಇವರ 'ಹುಳುಕನ್ನು' ತಿಳಿದಿದ್ದ ಫಾರೆಸ್ಟರು ಈ ಕ್ರಮ ಕೈಗೊಂಡದ್ದೆಂದೂ ಸಿಬ್ಬಂದಿ ಗುಸುಗುಸು.

ಈ ಬಗ್ಗೆ ಅವರಿಬ್ಬರನ್ನೂ ವಿಚಾರಿಸಲು 'ಮುಂಜಾವು' ಹೋದಾಗ ಇಬ್ಬರೂ ಭೇಟಿಯಾಗಲಿಲ್ಲ.

ಅರ್ಧ ಹಣ ಸಾರ್ವಜನಿಕ ವಂತಿಗೆಯೊಡನೆ ೬ ಲಕ್ಷ ರೂ. ರಸ್ತೆ ಟಾರು ಕಾಮಗಾರಿ

ಕೊಪ್ಪ: ಸಮೀಪದ ಕೊರ್ಡಿಹಿತ್ಲಿನಿಂದ ಹೊಸೂರು ಮಾರ್ಗವಾಗಿ ಜಯಪುರಕ್ಕೆ ಹೋಗುವ ಜಿಲ್ಲಾ ಪರಿಷತ್ ರಸ್ತೆಗೆ ಟಾರು ಹಾಕುವ ಕಾಮಗಾರಿ ಅರ್ಧ ಜಿ.ಪ ಅನುದಾನ ಹಾಗೂ ಅರ್ಧ ಸಾರ್ವಜನಿಕ ವಂತಿಗೆಯೊಂದಿಗೆ ಈ ವರ್ಷವೇ ಆರಂಭವಾಗಲಿದೆ.

ಒಟ್ಟು ೧೮ ಕಿ.ಮೀ. ಉದ್ದದ ಈ ರಸ್ತೆಯಲ್ಲಿ ೭ ಕಿ.ಮೀ.ನಷ್ಟು ಟಾರು ಆಗಿದ್ದು, ಇನ್ನೂ ಸುಮಾರು ೧೧ ಕಿ.ಮೀ.ಗಳಷ್ಟು ಟಾರ್ ಆಗಬೇಕಾಗಿದೆ. ಈ ವರ್ಷ ೬ ಲಕ್ಷ ರೂ. ವೆಚ್ಚದಲ್ಲಿ ೬ ಕಿ ಮೀ. ದೂರಕ್ಕೂ, ೯೨-೯೩ನೇ ಸಾಲಿನಲ್ಲಿ ಉಳಿದ ಭಾಗಕ್ಕೆ ಪುನಃ ೬ ಲಕ್ಷ ರೂ. ವೆಚ್ಚದಲ್ಲೂ ಟಾರು ಹಾಕಲಾಗುವುದು.

ಈ ವರ್ಷದ ಕಾಮಗಾರಿಗಾಗಿ ಮೈಸೂರು ಪ್ಲಾಂಟೇಶನ್‌ನವರು ೧ ಲಕ್ಷ ೫ ಸಾವಿರ ರೂ.ಗಳನ್ನೂ, ಅಲಗೇಶ್ವರ ಎಸ್ಟೇಟ್‌ನವರು ೧ ಲಕ್ಷ ರೂ.ಗಳನ್ನೂ ಈಗಾಗಲೇ ನೀಡಿದ್ದು, ಭಂಡಾರ ಎಸ್ಟೇಟ್ ೫೦ ಸಾವಿರ, ಹೊಸೂರು ವಿಷ್ಣುಮೂರ್ತಿ ಹೆಬ್ಬಾರ್ ೨೫ ಸಾವಿರ, ಲಾರೆನ್ಸ್ ಎಸ್ಟೇಟ್ ೨೦ ಸಾವಿರ ರೂ.ಗಳನ್ನು ನೀಡಲು ವಾಗ್ದಾನ ಮಾಡಿದ್ದಾರೆ ಜಿ.ಪ. ೩ ಲಕ್ಷ ರೂ. ನೀಡಲಿದೆ.

ಈ ವಿಚಾರ 'ಮುಂಜಾವು'ಗೆ ತಿಳಿಸಿರುವ ಬಿಂತ್ರವಳ್ಳಿ ಮಂಡಲ ಪ್ರಧಾನ ವಸಂತ ಅಜಿಲರು, ವಂತಿಗೆ ನೀಡಿರುವ ಎಲ್ಲರಿಗೂ ಅಭಿನಂದನೆ ಸಲ್ಲಿಸಿದ್ದಾರೆ.

ಸೇನೆ ಭರ್ತಿಗೆ ಜು. ೯ ಕಡೂರಲ್ಲಿ ಸಂದರ್ಶನ

ಕೊಪ್ಪ : ಭಾರತೀಯ ಸೇನಾ ಪಡೆಯ ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮಂಗಳೂರು ಸೇನಾ ಭರ್ತಿ ಕಾರ್ಯಾಲಯದವರು ೯-೭-೯೧ ನೇ ಮಂಗಳವಾರ ೭-೩೦ಕ್ಕೆ ಕಡೂರಿನ ಪ್ರವಾಸಿ ಮಂದಿರದಲ್ಲಿ ಸಂದರ್ಶನ ನಡೆಸಲಿದ್ದಾರೆ.

೧೭ರಿಂದ ೨೫ ವರ್ಷದೊಳಗಿರುವ, ಎಸ್ಸೆಸ್ಸೆಲ್ಸಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು ಹಾಗೂ ಫೇಲಾದವರು ಸಹ ಸಂದರ್ಶನದಲ್ಲಿ ಭಾಗವಹಿಸಬಹುದು.

ಈಗಾಗಲೇ ಸಂದರ್ಶನಕ್ಕೆ ಕರೆಪತ್ರ ಬಂದಿರುವವರು, ೧-೯-೯೦ರಿಂದೀಚೆಗೆ ಕರೆಪತ್ರ ಬಂದಿದ್ದು ಗೈರು ಹಾಜರಾದ ಅಥವಾ ಆಯ್ಕೆಯಾಗಿ ಸೇರ್ಪಡೆಗೊಂಡಿಲ್ಲದವರು ಹಾಗೂ ಕರೆ ಪತ್ರ ಬಾರದಿರುವವರು ಸಹ ಸಂದರ್ಶನದಲ್ಲಿ ಭಾಗವಹಿಸಬಹುದು. ಭೂಸೇನೆ ಮತ್ತು ನೌಕಾಸೇನೆಗಳ ಬಗ್ಗೆ ಮಾಹಿತಿ ಹಾಗೂ ಅರ್ಜಿ ನಮೂನೆಗಳನ್ನು ಉಚಿತವಾಗಿ ಸ್ಥಳದಲ್ಲೇ ವಿತರಿಸಲಾಗುತ್ತದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀಪವಟಿಗೆ ಅಚ್ಚುಕೂಟ, ಕೊಪ್ಪ